# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 41 | ಡಿಸೆಂಬರ್ 23, 1979 | 40 ಪೈಸೆ

## ಎಡ ಶಕ್ತಿಗಳನ್ನು ಬೆಂಬಲಿಸಿ

ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವಂತೆ, ಚುನಾವಣಾ ಕಣದಲ್ಲಿರುವ ವಿವಿಧ ರಾಜಕೀಯ ಪಕ್ಷಗಳು ಜನಗಳಿಗೆ ಏನೆಲ್ಲಾ ಭರವಸೆಗಳನ್ನು ಕೊಡುತ್ತಿದ್ದಾರೆ. ಅದರಲ್ಲೂ ರಾಷ್ಟ್ರೀಯ ಪಕ್ಷಗಳಾದ ಇಂದಿರಾ ಕಾಂಗ್ರೆಸ್ ಮತ್ತು ಜನತಾಪಕ್ಷಗಳು ತಾವು ಮಾತ್ರ ಸರಕಾರ ರಚಿಸಲು ಸಾಧ್ಯವೆಂದು ಸಾಧಿಸುತ್ತಿದ್ದಾರೆ. ಇಂದಿರಾ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾಗಾಂಧಿಯವರು ಸುಭದ್ರ ಸರಕಾರ ಬೇಕಾದರೆ ನಮಗೆ ಮತಕೊಡಿ ಎನ್ನುತ್ತಿದ್ದಾರೆ. ಆದರೆ, ಕಾಂಗ್ರೆಸ್ (ಐ) ಆಡಳಿತದಲ್ಲಿ ಪಕ್ಷ ಮತ್ತು ಸರಕಾರಗಳು ಆಂತರಿಕ ಬಿಕ್ಕಟ್ಟು, ಮಂತ್ರಿಮಂಡಳಗಳ ಮನಸೋಇಚ್ಛೆ ಬದಲಾವಣೆ, ಆಡಳಿತದಲ್ಲಿ ಹಸ್ತಕ್ಷೇಪಗಳನ್ನು ಎದುರಿಸಬೇಕಾಯಿತು. ತನ್ನ ಕುಟುಂಬದ ಹಿತರಕ್ಷಣೆಗಾಗಿ ದೇಶದಲ್ಲಿ ತುರ್ತುಪರಿಸ್ಥಿತಿ ತಂದು ಮಾಡಿದ ಅಕೃತ್ಯಗಳನ್ನು ವಿಚಾರಣಾ ಆಯೋಗಗಳು ಬಹಿರಂಗಪಡಿಸಿವೆ. ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ, ಒಂದು ಕಡೆ ಎಲ್ಲಾ ವರ್ಗದ ಜನತೆಯ ಜೀವನಮಟ್ಟ ಕುಸಿಯುತ್ತಿರುವಾಗ, ಮತ್ತೊಂದು ಕಡೆ ಜಮೀನುದಾರರ ಹಾಗೂ ಬಂಡವಾಳಶಾಹಿಗಳ ಲಾಭ ಬೆಳೆಯುತ್ತಾ ಹೋಯಿತು.

### ಸಂಪಾದಕೀಯ

ಜನತಾಪಕ್ಷದ ಆಡಳಿತದಲ್ಲಿ ನಡೆದದ್ದೇನು? ಆರೆಸ್ಸೆಸ್‌ನಂತಹ ಛಿದ್ರಕಾರಿ ಶಕ್ತಿಗಳು ಬೆಳೆಯಲು ಅವಕಾಶವಾಯಿತು. ಹಿಂದೂ ಸಂಸ್ಕೃತಿಯ ಪುನರುತ್ಥಾನದ ನೆಪದಲ್ಲಿ ದೇಶದಲ್ಲಿ ಜಾತ್ಯಾತೀತತೆ ಹಾಗೂ ಆಧುನಿಕ ವಿಚಾರಧಾರೆಗೆ ಅಡ್ಡಿಮಾಡುತ್ತಿರುವ ಈ ಮತೀಯ ಶಕ್ತಿಗಳಿಗೆ ಬಾಬೂ ಜಗಜೀವನರಾವ್ ಮತ್ತು ಚಂದ್ರಶೇಖರ್‌ರವರು ತಮ್ಮ ಹೆಸರನ್ನು ಬಳಸಿಕೊಳ್ಳಲು ಅವಕಾಶ ನೀಡಿರುವುದು ವಿಷಾದಕರ. ಅಧಿಕಾರಕ್ಕೆ ಬಂದ ಹೊಸದರಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಜನತೆಗೆ ವಾಪಸುಕೊಟ್ಟು ಜನತಾಪಕ್ಷ, ಮುಂದಿನ ದಿನಗಳಲ್ಲಿ ಮಾಡಿದ್ದು ಮಿನಿ ಮೀಸಾ ತಂದು ದುಡಿಯುವ ವರ್ಗದ ಹೋರಾಟಗಳನ್ನು ಮುರಿದಿದ್ದಲ್ಲದೆ, ಕಾಂಗ್ರೆಸ್ ಅನುಸರಿಸಿದ ಬಂಡವಾಳಶಾಹಿ ನೀತಿಗಳನ್ನೇ ಅನುಸರಿಸಿತು.

[ಕಡೆಯ ಪುಟ ನೋಡಿ]

## ಮಂಗಳೂರು ಲೋಕಸಭಾ ಕ್ಷೇತ್ರ ಬಿರುಸಿನ ಚುನಾವಣಾ ಪ್ರಚಾರ ಪ್ರಾರಂಭ

ಕೊಡಗು ಜಿಲ್ಲೆ ಹಾಗೂ ಅರ್ಧ ದ.ಕ.ಜಿಲ್ಲೆಯನ್ನು ಒಳಗೊಂಡಿರುವ ಮಂಗಳೂರು ಲೋಕಸಭಾ ಕ್ಷೇತ್ರ, ಎಂಟು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಕೊಡಗಿನ ಸೋಮವಾರಪೇಟೆ, ವಿರಾಜಪೇಟೆ ಹಾಗೂ ಮಡಿಕೇರಿ, ದ.ಕ. ಜಿಲ್ಲೆಯ ಮಂಗಳೂರು, ಪುತ್ತೂರು, ಸುಳ್ಯ, ಉಳ್ಳಾಲ ಹಾಗೂ ವಿಟ್ಲ ಪ್ರದೇಶಗಳು ಮಂಗಳೂರು ಲೋಕಸಭಾ ಕ್ಷೇತ್ರಕ್ಕೆ ಸೇರಿವೆ.

ದೇಶದಲ್ಲಿ ಉಂಟಾಗಿರುವ ವಿಶೇಷ ರಾಜಕೀಯ ಪರಿಸ್ಥಿತಿಯಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಸರ್ವಾಧಿಕಾರಿ ಹಾಗೂ ಜಾತೀಯವಾದಿ ಶಕ್ತಿಗಳನ್ನು ಸೋಲಿಸಬೇಕೆಂಬುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಲುಮೆ. ರಾಜ್ಯದಲ್ಲಿಯೂ ಅಂತಹ ಒಂದು ಹೊಂದಾಣಿಕೆಗೆ ಬರಲು ನಮ್ಮ ಪಕ್ಷ ಪ್ರಯತ್ನಿಸಿತು. ಆದರೆ, ವಿಷಾದಕರ ರೀತಿಯಲ್ಲಿ ಪ್ರಯತ್ನ ವಿಫಲವಾಗಿದೆ. ರಾಷ್ಟ್ರೀಯ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಜ್ಯದಲ್ಲಿ ತನ್ನ ಬಲಿಷ್ಠ ಕೇಂದ್ರವಾದ ಮಂಗಳೂರು ಕ್ಷೇತ್ರದಲ್ಲಿ ಅಭ್ಯರ್ಥಿಯನ್ನು ನಿಲ್ಲಿಸುವುದು ಖಂಡಿತವೆಂದು ಮಿತ್ರ ಪಕ್ಷಗಳಿಗೆ ಹೇಳಿದ್ದರೂ ಅರಸು ಕಾಂಗ್ರೆಸ್ ತಳೆದ ನಿಲುವಿನಿಂದಾಗಿ ಹೊಂದಾಣಿಕೆ ಆಗಲಿಲ್ಲ. ಅರಸು ಕಾಂಗ್ರೆಸ್ಸಿನವರು ಏಕಪಕ್ಷೀಯವಾಗಿ ತಮ್ಮ ಅಭ್ಯರ್ಥಿಗಳಹೆಸರನ್ನು ಪ್ರಕಟಿಸಿದ್ದರಿಂದ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತಾನೂ ತನ್ನ ಅಭ್ಯರ್ಥಿಯಾಗಿ ಪಕ್ಷದ ಕಾರ್ಯದರ್ಶಿ ಕಾಂ.ಎಂ.ಕೆ. ಭಟ್‌ರವರನ್ನು ನಿಲ್ಲಿಸಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಇಂದಿರಾಕಾಂಗ್ರೆಸ್, ಅರಸುಕಾಂಗ್ರೆಸ್

[ಕಡೆಯ ಪುಟ ನೋಡಿ]

## ಹೋರಾಟದ ಕಣದಲ್ಲಿ ಎಡರಂಗ ಮುಂದು

ಲೋಕಸಭಾ ಚುನಾವಣೆಯಕಣದಲ್ಲಿ ಬಲಪಂಥೀಯ ಪಕ್ಷಗಳು ಪರಸ್ಪರ ತಿಕ್ಕಾಟ, ಆಂತರಿಕ ಕಲಹ, ಪಕ್ಷಾಂತರಗಳಲ್ಲಿ ತೊಡಗಿರುವಾಗ ಎಡಪಕ್ಷಗಳು ಉಳಿದೆಲ್ಲಾ ಪಕ್ಷಗಳಿಗಿಂತ ಮುಂದಿವೆ. ಸೈದ್ಧಾಂತಿಕ ತಳಹದಿಯ ಮೇಲೆ ಹೋರಾಟಕ್ಕೆ ನಿಂತಿರುವ ಎಡಪಕ್ಷಗಳಿಗೆ ಶಿಸ್ತಿನ ಸ್ವಯಂಸೇವಕರು, ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಹಾಗೂ ಪಕ್ಷದ ಐಕ್ಯತೆ ಎಡಪಕ್ಷಗಳ ಐಕ್ಯತೆಯನ್ನು ಖಚಿತಗೊಳಿಸಿದೆ.

ಪ. ಬಂಗಾಳದಲ್ಲಿ ನವೆಂಬರ್ ಕೊನೆಯ ವಾರದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಾರ್ವಜನಿಕ ಸಭೆಗಳು, ಬೃಹತ್ ಮತಪ್ರದರ್ಶನಗಳು ನಡೆದವು. ಪ. ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸುರವರು ಇಂತಹ ಎರಡುಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಒಂದು ಸಭೆ ಕಲ್ಕತ್ತಾ ಉತ್ತರದಲ್ಲಿ ಮತ್ತೊಂದು ಕಲ್ಕತ್ತಾ ದಕ್ಷಿಣದಲ್ಲಿ. ಈ ಎರಡು ಸಭೆಗಳು ನವೆಂಬರ್ 22ರಂದು ನಡೆದವು. ಒಂದು ಸಭೆ ಕಾಂ. ಸುನೀಲ್ ಮೊಯಿತ್ರಾರವರ ಬೆಂಬಲವಾಗಿ ನಡೆದರೆ, ಮತ್ತೊಂದು ಸಭೆ ಪ. ಬಂಗಾಳ ಕಾಲೇಜ್ ಮತ್ತು ವಿಶ್ವವಿದ್ಯಾಲಯ ಅಧ್ಯಾಪಕರ ಸಂಘದ ಕಾರ್ಯದರ್ಶಿ ಕಾಂ. ಸತ್ಯಾ ಸಾಧನ ಚಕ್ರವರ್ತಿಯವರ ಬೆಂಬಲಾರ್ಥವಾಗಿ ನಡೆಯಿತು. ಎರಡೂ ಸಭೆಗಳಲ್ಲಿ ಸಹಸ್ರಾರು ಜನತೆ ನೆರೆದಿದ್ದರು.

ಮಾರನೆಯ ದಿನ ಎಡರಂಗದ ಛೇರ್ಮನ್ ಕಾಂ. ಪ್ರಮೋದ್‌ದಾಸ್ ಗುಪ್ತಾರವರು ಭಾಗವಹಿಸಿದ್ದ ಭಾರಿ ಬಹಿರಂಗ ಸಭೆಯೊಂದು 24 ಪರಗಣ ಜಿಲ್ಲೆಯ ಜೋಮ್‌ನಗರದಲ್ಲಿ ನಡೆಯಿತು. ಇಲ್ಲಿ ಸಂಯುಕ್ತರಂಗದ ಅಭ್ಯರ್ಥಿ ಸನತ್ ಮಂಡಲ್ (ಆರೆಸ್ಪಿ) ಸ್ಪರ್ಧಿಸಿದ್ದಾರೆ. 24-11-79ರಂದು 24 ಪರಗಣ ಜಿಲ್ಲೆಯ ಮಥುರಾಪುರ ಕ್ಷೇತ್ರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ 25,000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಬೀಡಿ ಕಾರ್ಮಿಕರು, ರೈತರು, ಸಣ್ಣ ಪುಟ್ಟ ವ್ಯಾಪಾರಿಗಳು ಹಾಗೂ ಸಾರಿಗೆ ನೌಕರರು ಭಾಗವಹಿಸಿದ್ದ ಮೆರವಣಿಗೆ ಅದ್ದೂರಿಯಾಗಿತ್ತು. ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಿ ನಡೆದ ಬಹಿರಂಗ ಸಭೆಯನ್ನು ಕೋರ್ಟ್ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ಭಾರಿ ಜನಸಂದಣಿಯನ್ನು ಸೇರಿಸಬಹುದಾದ ಈ ಮೈದಾನದಲ್ಲಿ ಕಾಲಿಡುವುದಕ್ಕೆ ಜಾಗವಿಲ್ಲದಷ್ಟು ಜನತೆ ಸೇರಿತ್ತು. ಕಾಂ. ಜ್ಯೋತಿಬಸು ಮೇಲಿನ ಎರಡೂ ಸಭೆಗಳಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಹೌರಾ ಜಿಲ್ಲೆಯಲ್ಲಿ ಮೂರು ಕಡೆಗಳಲ್ಲಿ ನಡೆದ ಬಹಿರಂಗ ಸಭೆಗಳಲ್ಲಿಯೂ ಕಾಂ. ಜ್ಯೋತಿಬಸು ಭಾಗವಹಿಸಿದ್ದರು. ಶಾಂಪುರದಲ್ಲಿ ನಡೆದ ಸಭೆಯಲ್ಲಿ ಮುವತ್ತು ಸಾವಿರಕ್ಕೂ ಹೆಚ್ಚು ಜನರು ಇದ್ದರು.

ತಾ. 26-11-79ರಂದು ಹೂಗ್ಲಿ ಹಾಗೂ ಮಿಡ್ನಾಪುರ ಜಿಲ್ಲೆಗಳಲ್ಲಿಯೂ ಸಾರ್ವಜನಿಕ ಸಭೆಗಳು ನಡೆದವು. ಬೆಜೂರಿಯಲ್ಲಿ ನಡೆದ ಸಭೆಗೆ ನಲವತ್ತು ಸಾವಿರ ಜನರು ನೆರೆದಿದ್ದು ಕಾಂ. ಜ್ಯೋತಿಬಸು ಭಾಷಣವನ್ನು ಆಲಿಸಿದರು.

**ಕೇರಳ :**

ಕೇರಳದಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ರಂಗ ಅಸ್ತಿತ್ವಕ್ಕೆ ಬಂದು ಮಿತ್ರ ಪಕ್ಷಗಳಲ್ಲಿ ಸ್ಥಾನಗಳ ಬಗ್ಗೆ ಹೊಂದಾಣಿಕೆಯಾದ ಕೂಡಲೇ, ಎಲ್ಲೆಡೆ ಚುನಾವಣಾ ಸಿದ್ಧತೆಗಳು ಭರದಿಂದ ನಡೆದಿವೆ. ಚುನಾವಣಾ ಸಮಿತಿಗಳ ರಚನೆಯಾಗಿ ಅವುಗಳ ನೇತೃತ್ವದಲ್ಲಿ ಕೇರಳದಾದ್ಯಂತ ಪ್ರತಿಗಾಮಿ ಶಕ್ತಿಗಳಾದ ಇಂದಿರಾಕಾಂಗ್ರೆಸ್ ಜನತಾ ಪಕ್ಷ ಮತ್ತ ದರ ಬಾಲ ಪಕ್ಷಗಳನ್ನು ಪುಡಿಪುಡಿ ಮಾಡಲು ಸಿದ್ಧತೆಗಳು ನಡೆಯುತ್ತಿವೆ. ಇಪ್ಪತ್ತು ಲೋಕಸಭಾ ಕ್ಷೇತ್ರಗಳ ಪೈಕಿ ಇಪ್ಪತ್ತೂ ಸ್ಥಾನಗಳು ಸಿ. ಪಿ. ಐ(ಎಂ) ನೇತೃತ್ವದ ರಂಗಕ್ಕೆ ಸಿಗುವುದರಲ್ಲಿ ಸಂಶಯವಿಲ್ಲ. ಈ ಬಾರಿ ಚುನಾವಣೆಯ ಒಂದು ವಿಶೇಷತೆಯೆಂದರೆ ರಾಜ್ಯದ ಏಕೈಕ ವಿದ್ಯಾರ್ಥಿ ನಾಯಕ, ಭಾರತ ವಿದ್ಯಾರ್ಥಿ ಫೆಡರೇಶನ್ ಕೇರಳ ರಾಜ್ಯ ಶಾಖೆ ಕಾರ್ಯದರ್ಶಿ ಕಾಂ. ಎ. ಕೆ. ಬಾಲನ್ ಮುಕುಂದಪುರ ಕ್ಷೇತ್ರದಿಂದ ಸ್ಪರ್ಧಿಸಲಿದ್ದು, ರಾಜ್ಯದ ಎಲ್ಲಾ ವಿದ್ಯಾರ್ಥಿಗಳು ಕಾಂ. ಬಾಲನ್ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ. ಎಸ್. ಎಫ್. ಐ. ಸ್ವತಂತ್ರವಾಗಿ ಚುನಾವಣಾ ಪ್ರಚಾರವನ್ನು ಇತರ ಸಾಮೂಹಿಕ ಸಂಘಟನೆಗಳ ಸಹಯೋಗದಿಂದ ನಡೆಸುತ್ತಿದೆ. ಮತ್ತೊಂದು ಮಹತ್ವದ ಚುನಾವಣಾ ಕ್ಷೇತ್ರವಾದ ಆಲೆಪ್ಪಿಯಲ್ಲಿ ದಿವಂಗತ ಕಾಂ. ಎ. ಕೆ. ಗೋಪಾಲನ್‌ರವರ ಪತ್ನಿ ಶ್ರೀಮತಿ ಸುಶೀಲಾ ಗೋಪಾಲನ್ ಸ್ಪರ್ಧಿಸಿದ್ದಾರೆ. ರೈತ, ಕಾರ್ಮಿಕರ ಉನ್ನತಿಗಾಗಿ ಅಪಾರವಾಗಿ ಶ್ರಮಿಸಿದ ಕಾಂ. ಎ. ಕೆ. ಜಿ. ಯಂತೆಯೇ ಕಾಂ. ಶ್ರೀಮತಿ ಸುಶೀಲಾ ಗೋಪಾಲನ್ ಬಡ ಜನತೆಯ ಅಪಾರ ಪ್ರೀತಿಗೆ ಪಾತ್ರರಾಗಿದ್ದಾರೆ. ಕೆಲವೇ ದಿನಗಳಲ್ಲಿ ಪಕ್ಷದ ರಾಷ್ಟ್ರೀಯ ಮುಖಂಡರು ಹಾಗೂ ರಾಜ್ಯದ ಮುಖಂಡರು ರಾಜ್ಯದಲ್ಲಿ ಸಂಚರಿಸುವರು.

**ತಮಿಳುನಾಡು :**

ತಮಿಳು ನಾಡಿನಲ್ಲಿ ಅಣ್ಣಾ ಡಿ.ಎಂ.ಕೆ. ಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಪಕ್ಷವು ರಾಜ್ಯದ ಮೂರು ಸ್ಥಾನಗಳಿಗೆ ಸ್ಪರ್ಧಿಸಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಭದ್ರಕೋಟೆಯಾದ ಮಧುರೈನಿಂದ ಪಕ್ಷದ ರಾಜ್ಯ ಶಾಖೆ ಕಾರ್ಯದರ್ಶಿಯಾದ ಕಾಂ. ಬಾಲಸುಬ್ರಮಣ್ಯಂ ಸ್ಪರ್ಧಿಸಿದ್ದಾರೆ. ಈ ಹಿಂದೆ ಮಧುರೈ ಕ್ಷೇತ್ರದಿಂದ ಗೆದ್ದಿದ್ದ ಇಂದಿರಾ ಕಾಂಗ್ರೆಸ್ಸಿನ ಶ್ರೀ ಸ್ವಾಮಿನಾಥನ್ ಈ ಬಾರಿ ತಮ್ಮ

[ಕಡೆಯ ಪುಟ ನೋಡಿ

# ಅನಿರ್ಧಿಷ್ಟ ಧರಣಿ ಮುಷ್ಕರ ಸಹಾಯಕ್ಕೆ ಮನವಿ

ತಾ. 5-12-79 ರಿಂದ ಬೆಂಗಳೂರು ವಿಧಾನಸೌಧದ ಮುಂದೆ ದೇವಿಕಾರಾಣಿ ರೋರಿಚ್‌ರವರ ಎಸ್ಟೇಟ್ ಹರಿಜನ ಕಾರ್ಮಿಕರು ಕುಟುಂಬ ಸಮೇತರಾಗಿ "ಅನಿರ್ಧಿಷ್ಟ ಕಾಲದ ಧರಣಿ ಮುಷ್ಕರ" ನಡೆಸುತ್ತಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ದೇವಿಕಾರಾಣಿ ರೋರಿಚ್‌ರವರ ಒಡೆತನಕ್ಕೆ ಸೇರಿದ 800 ಎಕರೆ ಜಮೀನನ್ನು ತಾತಗುಣಿ ಎಸ್ಟೇಟ್ ಎಂಬ ಹೆಸರಿನಲ್ಲಿ ಮಾಲೀಕರು ಹೊಂದಿದ್ದಾರೆ. ಎಸ್ಟೇಟಿನಲ್ಲಿ "ಲಿನೋನಿಯಾ" ಸೆಂಟ್ ತಯಾರಿಸಿ ಹೊರ ದೇಶಕ್ಕೆ ರಫ್ತುಮಾಡಿ ವರ್ಷ ಒಂದಕ್ಕೆ 40-45 ಲಕ್ಷ ರೂಪಾಯಿ ಲಾಭ ಸಂಪಾದಿಸುತ್ತಿದ್ದಾರೆ.

ತಾತಗುಣಿ ಎಸ್ಟೇಟ್ ಹರಿಜನ ಕಾರ್ಮಿಕರಿಗೆ ದಿನ ಒಂದಕ್ಕೆ 3 ರೂ. ಕೊಡುತ್ತಿದ್ದಾರೆ. ಸರ್ಕಾರ ನಿಗದಿ ಮಾಡಿರುವ ಕನಿಷ್ಟ ಕೂಲಿ ಜಾರಿಮಾಡಿ ವಜಾಮಾಡಲ್ಪಟ್ಟ 11 ಜನ ಕಾರ್ಮಿಕರಿಗೆ ಪುನಃ ಕೆಲಸ, ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜಾ ಸೌಲಭ್ಯ ಮತ್ತು ಸರ್ಕಾರ ಎಸ್ಟೇಟನ್ನು ಪ್ಲಾಂಟೇಷನ್ ಕಾಯಿದೆಗೆ ಸೇರಿಸಬೇಕು ಮುಂತಾದ ನ್ಯಾಯಬದ್ಧ ಬೇಡಿಕೆಗಳನ್ನು ಇಟ್ಟು ಸುಮಾರು 135 ದಿವಸಗಳಿಂದ ಎಸ್ಟೇಟ್ ಗೇಟ್ ಮುಂದೆ ಹೋರಾಟ ಮಾಡುತ್ತಿದ್ದರೂ ಈಗ ಕಾರ್ಮಿಕರು ತಾ. 5-12-79 ರಿಂದ ಬೆಂಗಳೂರು ವಿಧಾನಸೌಧದ ಮುಂದೆ ಕುಟುಂಬದ ಮಕ್ಕಳುಮರಿ ಸಮೇತರಾಗಿ ತಮಗೆ ನ್ಯಾಯ ಸಿಕ್ಕುವವರೆಗೆ "ಅನಿರ್ಧಿಷ್ಟ ಕಾಲದ ಧರಣಿ ಮುಷ್ಕರ" ಮಾಡುವ ತೀರ್ಮಾನಮಾಡಿ ಬೆಂಗಳೂರಿಗೆ ಬಂದಿದ್ದಾರೆ.

ಆಡಳಿತ ವರ್ಗ ಹರಿಜನ, ಗಿರಿಜನರ ಉದ್ಧಾರ ಹಾಗೂ ದುರ್ಬಲರ ಏಳಿಗೆ ಮಾಡುತ್ತೇವೆಂದು ಕರ್ನಾಟಕದ ಮೂಲೆಮೂಲೆಯಲ್ಲಿ ಪ್ರಚಾರ ಮಾಡುತ್ತಿರುವ ರಾಜ್ಯ ಸರ್ಕಾರವು ಈ ಎಸ್ಟೇಟ್ ಹರಿಜನ ಕಾರ್ಮಿಕರ ಬೇಡಿಕೆಗಳನ್ನು ಇದುವರೆಗೆ ಈಡೇರಿಸಿಲ್ಲ. ಬದಲಾಗಿ ಮಾಲೀಕರಿಗೆ ಬೆಂಬಲಕೊಟ್ಟು 800 ಎಕರೆ ಜಮೀನನ್ನು ಮಾಲೀಕರಾದ ರೋರಿಚ್‌ನವರ ವಶದಲ್ಲಿ ಇಟ್ಟುಕೊಳ್ಳಲು ಸರ್ಕಾರ ಖುಷ್ಕಿ ಜಮೀನೆಂದು ಭೂ ಸ-ಧಾರಣೆ ಕಾಯಿದೆಯಲ್ಲಿ ರಿಯಾಯಿತಿ ಸಹ ಕೊಟ್ಟಿರುತ್ತದೆ. ಮತ್ತೊಂದು ಕಡೆ ಹೋರಾಟವನ್ನು ಮುರಿಯಲು ಪೋಲೀಸ್‌ನವರಿಂದ ಕಾರ್ಮಿಕರ ಬಂಧನ ದಬ್ಬಾಳಿಕೆ ಮುಂತಾದ ತೊಂದರೆಯನ್ನು ಕೊಡುತ್ತಿದ್ದಾರೆ.

ಕಾರ್ಮಿಕರು ಸುಮಾರು 3 ವರ್ಷಗಳಿಂದ ಲೇಬರ್ ಅಧಿಕಾರಿಗಳಿಗೂ, ಜಿಲ್ಲಾ ಅಧಿಕಾರಿಗಳಿಗೂ ಮಾಲೀಕರಾದ ದೇವಿಕಾರಾಣಿ ರೋರಿಚ್‌ರವರಿಗೂ ಎಷ್ಟು ಸಾರಿ ಮನವಿಮಾಡಿಕೊಂಡಾಗ್ಯೂ ಏನೂ ಪ್ರಯೋಜನವಾಗಲಿಲ್ಲ.

ಕಳೆದ ವರ್ಷ ಕಾರ್ಮಿಕರ ಹೋರಾಟ ನಡೆದು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಮೆರವಣಿಗೆಯಲ್ಲಿ ಹೋಗಿ ಮನವಿ ಕೊಟ್ಟು ಹೋರಾಟ ಮಾಡುತ್ತಿರುವಾಗ ಹಾಗೂ ವಿಧಾನ ಸಭೆಯಲ್ಲಿ ಚರ್ಚೆಗೆ ಬಂದಾಗ ಸಹಾ ಮಾಲೀಕರಾದ ರೋರಿಚ್‌ರವರು ಸಂಘದಲ್ಲಿ ಒಂದು ಒಪ್ಪಂದಮಾಡಿಕೊಂಡು ಹೆರಿಗೆ ಕಾರಣಕ್ಕೋಸ್ಕರ ನಿಲ್ಲಿಸಿದ್ದ ಮಹಿಳಾ ಕಾರ್ಮಿಕರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಂಡರು. ನಂತರ ಮಾಲೀಕರು ಉಳಿದೆಲ್ಲಾ ಸಮಸ್ಯೆಗಳನ್ನು ಒಂದು ವಾರ ಕಳೆದು ಬಗೆಹರಿಸಿಕೊಳ್ಳುವುದಾಗಿ ಹೇಳಿದರು. ಕಾರ್ಮಿಕರು ಮುಷ್ಕರವನ್ನು ವಾಪಸ್ಸು ತೆಗೆದ ನಂತರ ಈಗ ಒಂದು ವರ್ಷದಿಂದ ಮಾಲೀಕರು ಒಪ್ಪಂದದ ಪ್ರಕಾರ ನಡೆದುಕೊಳ್ಳಲು ತಪ್ಪಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಕಾರ್ಮಿಕರು ಬೇರೆ ಮಾರ್ಗವಿಲ್ಲದೆ ತಾರೀಖು 24-7-79 ರಿಂದ ಹೋರಾಟದ ಹಾದಿಯಲ್ಲಿದ್ದಾರೆ.

ದಾರಿಕಾಣದ ಹರಿಜನ ಕಾರ್ಮಿಕರು ತಮ್ಮ ನ್ಯಾಯಬದ್ಧ ಬೇಡಿಕೆಗಳ ಬೆಂಬಲಕ್ಕೆ ಹಾಗೂ ತಮ್ಮ ದಿನನಿತ್ಯದ ಊಟ ತಿಂಡಿಗಳಿಗೆ ಈ ಕಾರ್ಮಿಕರು ಬೆಂಗಳೂರಿನ ಬೀದಿಬೀದಿಯಲ್ಲಿ ಸಂಚರಿಸಿ ಸಾರ್ವಜನಿಕರ ನೆರವನ್ನು ಕೋರುತ್ತಾರೆ. ಬಡ ಜನರ ಪರವಾಗಿ ನಿಲ್ಲುವ ಎಲ್ಲಾ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು ಹಾಗೂ ಪ್ರಜಾಪ್ರಭುತ್ವವಾದಿಗಳನ್ನು ಮತ್ತು ನ್ಯಾಯಪ್ರಿಯ ಜನತೆ ಈ ಹರಿಜನ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಕೊಟ್ಟು ತಮ್ಮ ಕೈಲಾದ ಸಹಾಯ ಮಾಡಬೇಕೆಂದು ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ಜಗನ್ನಾಥ್ ಹಾಗೂ ಅಧ್ಯಕ್ಷ ಕಾಂ. ರಾಮಭದ್ರಯ್ಯನವರು ಕೋರಿದ್ದಾರೆ.

●

# ದಲಿತ ವರ್ಗದ ಐಕ್ಯತೆ ಜಮೀನ್ದಾರರ ಅಸಭ್ಯತೆ

ಹರಿಜನರಲ್ಲಿ ಸಾವಿರಾರು ವರ್ಷಗಳಿಂದ ಬೆಳೆದು ಬಂದಿರುವ ಎಡಗೈ (ಮಾದಿಗ) ಬಲಗೈ (ಹೊಲೆಯ) ವ್ಯವಸ್ಥೆಯ ವಿರುದ್ಧ ಹೋರಾಡಬೇಕೆಂದು ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾಂ. ಬಿ. ಜಿ. ಗಂಗಾಧರಯ್ಯನವರು ತಾ12-12-79ರಂದು ಎರಡೂ ಪಂಗಡಗಳನ್ನು ಒಂದುಗೂಡಿಸುವ ಸಮಾರಂಭದಲ್ಲಿಕರೆನೀಡಿದರು. ಹಿಂದೂ ಧರ್ಮದ ಜಾತಿ ವ್ಯವಸ್ಥೆಯ ಧೂರ್ತತನದಿಂದ ಈ ಭಿನ್ನಾಭಿಪ್ರಾಯಗಳು ಬಂದಿವೆಯೆಂದು ತಿಳಿಸಿದ ಅವರು ಬಡವರೆಲ್ಲರೂ ಜಾತಿ ವ್ಯವಸ್ಥೆಯನ್ನು ಧೂಳಿಪಟ ಮಾಡಿ ವೈಜ್ಞಾನಿಕ ದೃಷ್ಟಿಕೋನವನ್ನು ಬೆಳಸಿಕೊಳ್ಳಬೇಕೆಂದರು. ದಲಿತ ಸಂಘರ್ಷ ಸಮಿತಿಯ ತಾಲ್ಲೂಕು ಸಂಚಾಲಕರಾದ ಕಾಂ. ಕೆ. ಹೆಚ್. ಮುದ್ದಹನುಮಯ್ಯನವರು ಸಮಾರಂಭದ ಅಧ್ಯಕ್ಷತೆ ವಹಿಸಿ ಬಡ ದುಡಿಯುವ ವರ್ಗದವರೆಲ್ಲಾ ಒಂದಾಗಬೇಕೆಂದು ತಿಳಿಸಿದರು. ಕುಣಿಗಲ್ ತಾಲ್ಲೂಕು, ಎಡಿಯೂರು ಹೋಬಳಿ, ಬಸವನ ಮತ್ತೀಕೆರೆಯಲ್ಲಿ ನಡೆದ ಈ ಸಮಾರಂಭದ ನೇತೃತ್ವವನ್ನು ಕಾಂ. ಗಂಗಯ್ಯ, ಕಾಂ. ತಿಮ್ಮಯ್ಯ ಹಾಗೂ ಮರಿಯಪ್ಪನವರು ವಹಿಸಿದ್ದರು.

ಈ ಕಾರ್ಯಕ್ರಮ ನಡೆದ ನಂತರ ಜಮೀನುದಾರ ವರ್ಗ ದಲಿತರ ಮೇಲೆ ಅಮಾನುಷ ದಬ್ಬಾಳಿಕೆಯನ್ನು ನಡೆಸುತ್ತಿದೆ. ಕಾಂ. ಸಿದ್ದಯ್ಯನವರು ಪಾಲು ಆಧಾರದ ಮೇಲೆ ಸಾಕಿದ್ದ ಹಸು, ಕರು ಮತ್ತು ಎಮ್ಮೆಗಳನ್ನು ಹೊಡೆದುಕೊಂಡು ಹೋಗಿರುವುದಲ್ಲದೆ, ಸಾಲವಾಗಿ ಪಡೆದಿದ್ದ ಅಲ್ಪಸ್ವಲ್ಪ ಹಣಕ್ಕೂ ಜಮೀನುದಾರರು ಕಿರುಕುಳ ಕೊಡಲು ಪ್ರಾರಂಭಿಸಿದ್ದಾರೆ. ಅಲ್ಲದೆ, ರೈತ ಸಂಘದ ಕಾರ್ಯದರ್ಶಿಯ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಲಾಗುತ್ತಿದೆ.

ಹಳ್ಳಿಯಲ್ಲಿ ದಲಿತರನ್ನು ಯಾರೂ ಕೆಲಸಕ್ಕೆ ಕರೆಯಬಾರದೆಂದು ತೀರ್ಮಾನಿಸಲುಮುಂದಾಗುತ್ತಿದ್ದಾರೆ. ಜಮೀನುದಾರರ ಕ್ರಮಗಳನ್ನು ತಾಲ್ಲೂಕು ರೈತ ಸಂಘ ಖಂಡಿಸಿದೆ. ಪ್ರಜಾಪ್ರಭುತ್ವ ಶಕ್ತಿಗಳು ಹಾಗೂ ಪ್ರಗತಿಪರ ರೈತ, ಕಾರ್ಮಿಕರು ಕೃಷಿ ಕೂಲಿಗಾರ ದಲಿತರ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಕೇಳಿಕೊಂಡಿದೆ.

●

## ಹನೂಲಿ ಕಾರ್ಮಿಕರ ಸಂಘದ ಸಭೆ

ತಾ. 9-12-79ನೇ ಭಾನುವಾರ ಮಧ್ಯಾಹ್ನ 4 ಘಂಟೆಗೆ ಶಿವಮೊಗ್ಗ ಹಮಾಲಿ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಬಿ. ತಿರುಕೊಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದರು. ಕಾರ್ಯದರ್ಶಿ ಶ್ರೀ ಕೆ. ಚಂದುಕುಟ್ಟಿಯವರು ಸಂಘದ ಚಟುವಟಿಕೆಗಳ ಬಗ್ಗೆ ವರದಿ ಮಾಡಿದರು. ಕೋಶಾಧ್ಯಕ್ಷ ಶ್ರೀ ಪಿ. ಶಂಕರನಾರಾಯಣನವರು ಮಾತನಾಡುತ್ತಾ, ಸಂಘದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರುಗಳಾಗಿ ಸಂಘವನ್ನು ಬಲಪಡಿಸಲು ಕರೆ ನೀಡಿದರು.

ನಿತ್ಯೋಪಯೋಗಿ ಸಾಮಾನುಗಳ ಬೆಲೆ ಅಧಿಕವಾಗಿರುವ ಈ ಸಂದರ್ಭದಲ್ಲಿ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸಕ್ಕೆ ಕೂಲಿ ಹೆಚ್ಚಳ ಕೇಳಬೇಕೆಂದು ತೀರ್ಮಾನಿಸಿ ವರ್ತಕರು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ಕೇಳಿಕೊಳ್ಳಲಾಗಿದೆ.

○

# ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಅಂತಿಮ ಪಟ್ಟಿ

### ಆಂಧ್ರಪ್ರದೇಶ

1. ನೆಲ್ಲೂರು — ಪಿ. ಭಾನುರಾಜು
2. ತೆನಾಲಿ — ಎಲ್. ಬಿ. ಗಂಗಾಧರರಾವ್
3. ನರಸಾಪುರ — ಯು. ರಾಮಮ್
4. ಮಿರ್ಯಾಲ್‌ಗುಡಂ — ಬಿ. ಎನ್. ರೆಡ್ಡಿ
5. ಖಮ್ಮಾಮ್ — ಡಾ. ವೈ. ರಾಧಾಕೃಷ್ಣಮೂರ್ತಿ

### ರಾಜಾಸ್ಥಾನ್

6. ಸಲುಂಬೂರ್ (ಮೀಸಲು) — ನಾರಾಯಣ ಮನತ್

### ಉತ್ತರ ಪ್ರದೇಶ

7. ಅಕ್ಬರ್‌ಪುರ — ರಾಮ್‌ಬಿಹಾರಿ

### ಕರ್ನಾಟಕ

8. ಮಂಗಳೂರು — ಎಂ. ಕೆ. ಭಟ್

### ಬಿಹಾರ್

9. ವೈಶಾಲಿ — ಸಿಯಾಬರ್‌ಶರಣ್‌ಶ್ರೀವಾಸ್ತವ
10. ಕಟಿಹಾರ್ — ಸುಬೋಧ್ ರಾಯ್
11. ನವಡಾ (ಮೀಸಲು) — ಪ್ರೇಮ್‌ಪ್ರದೀಪ್

### ಮಹಾರಾಷ್ಟ್ರ

12 ಹಂಗೋಲಿ — ವಿಠ್ಠಲ್‌ರಾವ್ ನಾಯಿಕ್

## ವಿಧಾನಸಭಾ ಉಪಚುನಾವಣೆ

### ಆಂಧ್ರ

ಪೆಮ್‌ದುರ್‌ಪಲ್ಲಿ — ಎಸ್. ಗಂಗಾಧರರೆಡ್ಡಿ

## ಮಣಿಪುರ ರಾಜ್ಯ ವಿಧಾನಸಭೆ

ಪಾಟ್‌ಸೋಯ್ — ಸಪಮ್ ಐಭೋಲ್ ಸಿಂಗ್

ಖುಂಡ್‌ರಾಕ್ ಪಾಮ್ — ಯುಮ್‌ಲೆನ್‌ಬಾಮ್‌ಕುಲ್ಲಚಂದ್ರ ಸಿಂಗ್

## ಸಂತಾಪ ಸೂಚನಾ ಸಭೆ

ತಾ. 13-12-79ನೇ ಗುರುವಾರ ಬೆಳಿಗ್ಗೆ ನಗರದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಸಭೆ ಸೇರಿ, ಕಮ್ಯುನಿಸ್ಟ್ ಪಕ್ಷದ ಮತ್ತು ರೈತ ಕಾರ್ಮಿಕ ಮುಖಂಡರೂ ಆಗಿದ್ದ ನ್ಯಾಯವಾದಿ ಕಾಂ. ಬಿ.ಎನ್. ಅಪ್ಪಣ್ಣಹೆಗ್ಡೆಯವರು ತಾ.12-12-79ರಂದು ಸಂಜೆ ಸುಮಾರು 6ಘಂಟೆಗೆ ಹೃದಯಾಘಾತದಿಂದ ಮರಣಹೊಂದಿದ ಬಗ್ಗೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು. ದಿವಂಗತ ಕಾಂ.ಹೆಗ್ಡೆಯವರ ಬಗ್ಗೆ ಕಾಂ. ಚಂದುಕುಟ್ಟಿಯವರು ಮಾತನಾಡುತ್ತಾ 1958ರಿಂದ 1974ರವರೆಗೆ ಕಾಂ.ಹೆಗ್ಡೆಯವರು ಪಾರ್ಟಿಯ ರೈತ ಸಂಘದ ಮತ್ತು ಕಾರ್ಮಿಕ ಸಂಘದ ಚಟುವಟಿಕೆಗಳಲ್ಲಿ ಪ್ರಾಮುಖ್ಯ ಪಾತ್ರ ವಹಿಸುತ್ತಾ ಬಂದಿದ್ದರು.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ರೈತ ಸಂಘದ ಸ್ಥಾಪನೆಯಲ್ಲಿ ಮುಖ್ಯ ಪಾತ್ರ ವಹಿಸಿ ಸುಮಾರು 12 ವರ್ಷಗಳ ಕಾಲ ರೈತ ಸಂಘದ ಅಧ್ಯಕ್ಷರಾಗಿದ್ದರು. ಅವರ ಮುಖಂಡತ್ವದಲ್ಲಿ ಹಲವಾರು ರೈತ ಹೋರಾಟಗಳು ನಡೆದಿದ್ದನ್ನು ಸ್ಮರಿಸಿದರು. ಅನಾರೋಗ್ಯದ ಕಾರಣ ಅವರು ಸ್ವಲ್ಪ ಕಾಲ ರಾಜಕೀಯ ಚಟುವಟಿಕೆಗಳಿಂದ ದೂರವಿದ್ದರೂ ಪಾರ್ಟಿ ಹಿತೈಷಿಗಳಾಗಿದ್ದರು. ಅವರ ಗೌರವಾರ್ಥ ಎರಡು ನಿಮಿಷ ನಿಂತು ಮೌನವನ್ನು ಆಚರಿಸಿದರು.

# ಮೈಕೋ ಕಾರ್ಮಿಕರ ಹೋರಾಟಕ್ಕೆ ತೋಟ ಕಾರ್ಮಿಕರ ಬೆಂಬಲ

ಬೆಂಗಳೂರು ಮೈಕೋ ಕಾರ್ಖಾನೆಯ ಕಾರ್ಮಿಕರು ಕೆಲವು ನ್ಯಾಯಬದ್ಧವಾದ ಬೇಡಿಕೆಗಳನ್ನಿಟ್ಟು ಶಾಂತಿಯುತವಾಗಿ ನಡೆಸುತ್ತಿರುವ ಮುಷ್ಕರವನ್ನು ನಿಷೇಧಿಸಿರುವ ರಾಜ್ಯಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಹಾಸನ ಜಿಲ್ಲೆಯ ತೋಟ ಕಾರ್ಮಿಕರು ಕರ್ನಾಟಕ ತೋಟ ಕಾರ್ಮಿಕರ ಸಂಘದ ನೇತೃತ್ವದಲ್ಲಿಪ್ರತಿಭಟಿಸಿದರು. ಜಿಲ್ಲೆಯ ನಾನಾ ಭಾಗಗಳಿಂದ ಬಂದ ತೋಟ ಕಾರ್ಮಿಕರ ನೂರಾರು ಪ್ರತಿನಿಧಿಗಳು 3-12-79ರಂದು ರಾಜ್ಯಸರಕಾರದ ಹಾಗೂ ಮೈಕೋಆಡಳಿತ ಮಂಡಳಿಯ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಕಲೇಶಪುರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯವರಿಗೆ ಸಕಲೇಶಪುರ ಉಪವಿಭಾಗಾಧಿಕಾರಿಯವರ ಮೂಲಕ ಮನವಿ ಪತ್ರವೊಂದನ್ನು ಅರ್ಪಿಸಿ, ಮೈಕೋ ಕಾರ್ಮಿಕರ ಮುಷ್ಕರವನ್ನು ನಿಶೇಧಿಸಿರುವ ಆಜ್ಞೆಯನ್ನು ಹಿಂತೆಗೆದುಕೊಂಡು ಸರಕಾರ ಈ ವಿವಾದದಲ್ಲಿ ಕೂಡಲೇ ಮಧ್ಯಪ್ರವೇಶಿಸಿ ಈ ಕಾರ್ಮಿಕರ ನ್ಯಾಯವಾದಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಲಾಯಿತು. ಈ ಬೇಡಿಕೆಗಳನ್ನು ಒತ್ತಾಯಿಸಲು ಸಕಲೇಶಪುರದ ಉಪವಿಭಾಗಾಧಿಕಾರಿಯವರ ಕಛೇರಿಯ ಮುಂದೆ ಎರಡು ಗಂಟೆಗಳ ಕಾಲ ಧರಣಿ ಮುಷ್ಕರ ನಡೆಸಲಾಯಿತು ಹತ್ತಾರು ಮೈಲು ದೂರದಿಂದ ಬಂದ ಮಹಿಳಾ ತೋಟಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆ ಮತ್ತು ಧರಣಿಯಲ್ಲಿ ಪಾಲ್ಗೊಂಡಿದ್ದರು.

ಆನಂತರಸಂಘದಕಛೇರಿಯ ಮುಂದೆ ನಡೆದಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಕಾಂ. ವಿ. ಸುಕುಮಾರರವರು ಮಾತನಾಡಿ ಮೈಕೋ ಕಾರ್ಮಿಕರ ಹೋರಾಟದ ಮಹತ್ವವನ್ನು ವಿವರಿಸಿದರು. ಮೂಡಿಗೆರೆಯ ನಾಗಪಾಲ್ ತೋಟದ ಕಾರ್ಮಿಕ ಶಂಭುವನ್ನು ಪೋಲೀಸರು ಹೊಡೆದು ಕೊಂದಿರುವುದನ್ನು ಖಂಡಿಸಿ, ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ಒತ್ತಾಯಿಸಲಾಯಿತು. ಉಪಾಧ್ಯಕ್ಷ ಕಾಂ. ಚಿಂಪಾರವರು ಮಾತನಾಡಿ ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಉಗ್ರವಾಗಿ ಟೀಕಿಸಿದರು. ಬಡ ಕಾರ್ಮಿಕ ಶಂಭುವನ್ನು ಕೊಂದ ಪೋಲೀಸರ ಅಮಾನುಷ ವರ್ತನೆಯನ್ನು ಖಂಡಿಸಿ ಕಾರ್ಮಿಕ ವರ್ಗ ಎಚ್ಚೆತ್ತುಕೊಂಡು ಅನ್ಯಾಯದ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು. ಕೊನೆಯಲ್ಲಿ ಕಾಂ. ಪಾಲ್ ಡಿಸೋಜ ವಂದಿಸಿದರು. ○

## ಕಾರ್ಮಿಕ ವಿರೋಧಿಗಳನ್ನು ತಿರಸ್ಕರಿಸಿ

'ಐಕ್ಯರಂಗ' ಸಂಪಾದಕರ ಸನ್ನಿಧಾನಕ್ಕೆ,

ಮಾನ್ಯರೇ,

ಮೈಕೋ ಕಾರ್ಮಿಕರ ಮುಷ್ಕರದ ಬಗ್ಗೆ ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ಮುಖಂಡ ಎ.ಕೆ.ಸುಬ್ಬಯ್ಯನವರ ಹೇಳಿಕೆ ಅವರ ಕಾರ್ಮಿಕ ವಿರೋಧಿತನವನ್ನು ಎತ್ತಿತೋರಿಸುತ್ತೆ. ಅವರ ನಿಲುವು ಯಾವಾಗಲೂ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾಗಿ ಇದ್ದದ್ದೇ. ದೇಶದಲ್ಲಿ ಸಮಾಜವಾದೀ ವ್ಯವಸ್ಥೆಗೆ ವಿರೋಧ ವ್ಯಕ್ತಪಡಿಸುವ ರಾಜಕೀಯ ಪಕ್ಷಕ್ಕೆ ಸೇರಿದವರಿಂದ ಕಾರ್ಮಿಕರು ಎಂತಹ ಸಹಾನುಭೂತಿ ನಿರೀಕ್ಷಿಸಲು ಸಾಧ್ಯ? ಇಡೀ ಬೆಂಗಳೂರು ನಗರದ ಕಾರ್ಮಿಕರು ಮೈಕೋ ಕಾರ್ಮಿಕರ ಮುಷ್ಕರಕ್ಕೆ ಬೆಂಬಲವಾಗಿ ನಿಂತು, ಮೈಕೋ ಕಾರ್ಮಿಕರ ಹೋರಾಟ ಎಲ್ಲಾ ಕಾರ್ಮಿಕರ ಹೋರಾಟವೆಂದು ಒಕ್ಕೊರಲಿನಿಂದ ಘೋಷಣೆ ಕೂಗುತ್ತಿರುವಾಗ ಎ.ಕೆ.ಸುಬ್ಬಯ್ಯನವರು ಸಂಘದ ಪದಾಧಿಕಾರಿಗಳ ಮೇಲೆಮಾಡಿರುವಕ್ಷುಲ್ಲಕ ಆರೋಪಗಳು ಅವರ ನಿಜ ರಾಜಕೀಯ ಧೋರಣೆಗಳನ್ನು ಬಯಲಿಗೆಳೆದಿವೆ.

ಕಾರ್ಮಿಕರ ಬೇಡಿಕೆಗಳ ಬಗ್ಗೆ ಸರಿಯಾದ ತಿಳುವಳಿಕೆಯಿಲ್ಲದೆ, ಆಡಳಿತ ವರ್ಗದ ಏಜಂಟರಂತೆ ಹೇಳಿಕೆ ನೀಡಿರುವುದು, ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ರಾಜಕಾರಣಿಗಳು ಆಡಳಿತ ವರ್ಗದ ಬಲೆಗೆಬಿದ್ದು ಹೇಗೆ ಕಾರ್ಮಿಕ ವಿರೋಧಿಗಳಾಗುತ್ತಾರೆಂಬುದಕ್ಕೆ ಒಂದು ಉದಾಹರಣೆ.

ನಾಗರಿಕ ಬೇಡಿಕೆಗಳ ಬಗ್ಗೆ ಸಿ.ಪಿ.ಐ.(ಎಂ)ನವರು ಹೋರಾಟ ನಡೆಸಲಿಲ್ಲ ಬೆಂಗಳೂರು ಬಂದ್ ಮಾಡಿಸಲಿಲ್ಲ ಎಂದು ಪ್ರಲಾಪಿಸುವ ಎ.ಕೆ.ಸುಬ್ಬಯ್ಯನವರು, ತಾವೇ ಆ ಕಾರ್ಯವನ್ನು ಏಕೆ ಮಾಡಬಾರದಾಗಿತ್ತು? ತಾನು ಮಾಡದಕೆಲಸವನ್ನು ಇನ್ನೊಬ್ಬರಮೇಲೆ ಗೂಬೆ ಕೂರಿಸುವ ರೀತಿಯಲ್ಲಿ ಹೇಳುವುದು ಅವರಿಗೆ ತಕ್ಕುದಲ್ಲ. ಈಗ ಕಾರ್ಮಿಕರಿಗೆ ಸುಸಮಯ, ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದೆ. ಈ ರೀತಿ ಕಾರ್ಮಿಕ ವಿರೋಧಿ ನೀತಿಯುಳ್ಳ ರಾಜಕಾರಣಿಗಳಿಗೆ ಸರಿಯಾದ ಪಾಠ ಕಲಿಸುವ ಜವಾಬ್ದಾರಿ ಪ್ರತಿಯೊಬ್ಬ ರೈತ, ಕಾರ್ಮಿಕ, ಕೃಷಿಕೂಲಿಗಾರನ ಮೇಲೆ ಇದೆ. ಅದನ್ನು ಯಶಸ್ವಿಗೊಳಿಸಬೇಕಾಗಿ ನಾನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಇಂತಿ,ನೊಂದ ಸೋದರ ಕಾರ್ಮಿಕ
ಜಯರಾಂ
ಬೆಂಗಳೂರು. ●

## ಬೀಡಿ ಕಾರ್ಮಿಕರ ಸಭೆ

ದ.ಕ.ಜಿಲ್ಲೆ ಬಂಟ್ವಾಳ ತಾಲ್ಲೂಕು ಸರಪಾಡಿ ಗ್ರಾಮದ ಮುನ್ನಲಾಯಿ ಪದವಿನಲ್ಲಿ ಬೀಡಿ ಮಜೂರರ ಸಭೆಯು ತಾ.10-12-79ರಂದು B.H. ಬಂಗೇರರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಅಧ್ಯಕ್ಷರು ಸಭೆಕರೆದ ಉದ್ದೇಶವನ್ನು ವಿವರಿಸಿದರು. ಬಳಿಕ ಕಾಂ. ಬಿ. ಮಂಜುನಾಥಸಪಲ್ಯನವರು ಮಾತನಾಡುತ್ತಾ ಶೇ. 65 ಬೀಡಿ ಮಜೂರರು ಸಂಘಟಿತರಾಗದೇ ಇರುವುದರಿಂದ ಅಸಂಘಟಿತ ಮಜೂರರ ಮೇಲೆ ದಿನನಿತ್ಯ ಸುಲಿಗೆ ಶೋಷಣೆಗಳು ನಡೆಯುತ್ತಾ ಇರುತ್ತವೆ. ಇದರ ಬಗ್ಗೆ ಬೀಡಿ ಮಜೂರರು ವರ್ಗ ಜಾಗರೂಕರಾಗಿ ಸಂಘಟನೆಯನ್ನು ಬಲಪಡಿಸಬೇಕೆಂದು ಕರೆ ನೀಡಿದರು.

ಜನಾರ್ಧನ ಪೂಜಾರಿ (ಅಧ್ಯಕ್ಷ), ಮುಹಮ್ಮದ್ ಉಪಾಧ್ಯಕ್ಷ. ಸೋಮಪ್ಪ ಸಪಲ್ಯ ಕಾರ್ಯದರ್ಶಿ, ಸುಂದರ ಪೂಜಾರಿ ಜತೆಕಾರ್ಯದರ್ಶಿ, ಗಿರಿಯಪ್ಪ ಪೂಜಾರಿ ಕೋಶಾಧಿಕಾರಿಯಾಗಿರುವ 14ಮಂದಿಯ ಪ್ರಾದೇಶಿಕ ಬೀಡಿ ಮಜೂರರ ಸಮಿತಿಯನ್ನು ರಚಿಸಲಾಯಿತು.ಬಳಿಕ ಶ್ರೀ ಕೇಶ್ ನಾವೂರು ಇವರು ಧನ್ಯವಾದಕೊಟ್ಟು ಸಭೆಯನ್ನು ಮುಕ್ತಾಯಗೊಳಿಸಿದರು. ○

## ಚುನಾವಣಾ ಗೆಲುವಿಗೆ ಶ್ರಮಿಸಲು ನಿರ್ಧಾರ

ತಾ.11-12-79ರಂದು ದ. ಕ. ಜಿಲ್ಲಾ ರೈತ ಸಂಘದ ಸಭೆಯು ಸಂಘದ ಅಧ್ಯಕ್ಷರಾದ ಅಬ್ರಹಂ ಕರ್ಕಡರವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಯು.ಜನಾರ್ಧನನಾಯಕ್ ಸಂಘಟನೆಯ ವರದಿಯನ್ನು ಸಭೆಯ ಮುಂದಿಟ್ಟರು ಹಾಗೂ ಮುಂದಿನ ಸಂಘಟನೆಯ ಕಾರ್ಯಕ್ರಮ ಚರ್ಚೆ ಮಾಡಿ ಕಾರ್ಯಕ್ರಮ ಹಾಕಲಾಯಿತು. ಅಧ್ಯಕ್ಷರು ಮುಂದಿನ ಲೋಕಸಭೆಯ ಚುನಾವಣೆಯ ಕುರಿತು ಬೆಂಬಲ ಕೊಡಬೇಕಾದ ಅಗತ್ಯವನ್ನು ವಿವರಿಸಿದರು.

1980 ಜನವರಿ ತಿಂಗಳ ತಾ. 3ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಮಂಗಳೂರು ಕ್ಷೇತ್ರದಲ್ಲಿ ಸ್ಪರ್ಧೆ ಮಾಡುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಉಮೇದ್ವಾರರಾದ ಕಾಂ. ಮಹಾಬಲೇಶ್ವರ ಭಟ್‌ರವರಿಗೆ ಸರ್ವರೀತಿಯ ಸಹಾಯವನ್ನು ದುಡಿಯುವ ರೈತ ಕೃಷಿ ಕೂಲಿಗಾರರು ಕೊಡಬೇಕೆಂದು ದ. ಕ. ಜಿಲ್ಲಾ ರೈತ ಸಂಘವು ನಿರ್ಣಯ ಕೈಕೊಳ್ಳಲಾಯಿತು. ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

## ಬೆಲೆಏರಿಕೆ ವಿರುದ್ಧ ಪಂಜಿನ ಮೆರವಣಿಗೆ

ಕೋಲಾರ ಜಿಲ್ಲಾ ಚಿಕ್ಕಬಳ್ಳಾಪುರದಲ್ಲಿ ತಾ. 8-12-79ರಂದು ಸಂಜೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಕೃಷಿ ಕಾರ್ಮಿಕರು, ರೇಷ್ಮೆ ಕೆಲಸಗಾರರು ಮತ್ತು ಬಡವರು ಊರಿನಲ್ಲಿ ಸಕ್ಕರೆ, ಸೀಮೆಎಣ್ಣೆ ಸಿಗದೆ ಜನಸಾಮಾನ್ಯರು ಪರದಾಡುತ್ತಿರುವುದು ಹಾಗೂ ದಿನ ನಿತ್ಯದ ಬಳಕೆ ವಸ್ತುಗಳ ಬೆಲೆಗಳು ಗಗನಕ್ಕೆ ಏರುತ್ತಿರುವುದನ್ನು ಸಂಬಂಧಪಟ್ಟವರ ಗಮನಕ್ಕೆ ತರಲು ಬೃಹತ್ ಪಂಜಿನ ಮೆರವಣಿಗೆಯನ್ನು ಊರಿನ ಮುಖ್ಯಬೀದಿಗಳಲ್ಲಿನಡೆಸಿದರು. ಪ್ರದರ್ಶನಕಾರರು, ಕಾಳಸಂತೆ ವರ್ತಕರು, ಭ್ರಷ್ಟ ಅಧಿಕಾರಿಗಳು ಹಾಗೂ ನಿಷ್ಕ್ರಿಯ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಮೆರವಣಿಗೆಯ ನೇತೃತ್ವವನ್ನು ರೈತ, ಕಾರ್ಮಿಕರ ಮುಖಂಡ ಕಾಂ. ಎಸ್. ಲಕ್ಷ್ಮಯ್ಯ, ವಿ. ರಾಮಯ್ಯ, ಕಾಂತರಾಜ್, ನಾರಾಯಣಸ್ವಾಮಿ, ಕೃಷ್ಣಪ್ಪ ಮಹಬೂಬ್ ಜಾನ್, ಶಿವಣ್ಣ, ಗೋಪಾಲ್ ಹಾಗೂ ಮಹಿಳಾ ಮುಂದಾಳುಗಳಾದ ನಂಜಮ್ಮ, ಚಿನ್ನಮ್ಮ, ಅಶ್ವತ್ಥಮ್ಮ ಮುಂತಾದವರು ವಹಿಸಿದ್ದರು. ನಂತರ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಕಾಂ. ಲಕ್ಷ್ಮಯ್ಯನವರು ಅಗತ್ಯ ವಸ್ತುಗಳನ್ನು ಬಚ್ಚಿಟ್ಟು ಬೆಲೆ ಏರಿಕೆಗೆ ಕಾರಣರಾಗಿರುವ ವರ್ತಕರು ಹಾಗೂ ಅಧಿಕಾರಿಗಳು ಎಚ್ಚೆತ್ತುಕೊಳ್ಳದೆ, ಪರಿಸ್ಥಿತಿ ಹೀಗೆಯೇ ಮುಂದುವರಿದರೆ ತೀವ್ರ ಹೋರಾಟ ನಡೆಸಬೇಕಾಗುವುದೆಂದು ಎಚ್ಚರಿಕೆ ನೀಡಿದರು. ●

## ಪ್ಲೈವುಡ್ ಕಾರ್ಮಿಕರ ಒಕ್ಕೂಟ ರಚನೆಗೆ ಕರೆ

ಧಾರವಾಡದ, ಇಂಡಿಯನ್ ಪ್ಲಾಯ್ವುಡ್ ಕಾರ್ಮಿಕ ಸಂಘದ ಸಹಕಾರ್ಯದರ್ಶಿ ಕಾಂ. ಎಸ್.ಜಿ. ಪಾಟೀಲರು ಕರ್ನಾಟಕದಲ್ಲಿ ಇರುವ ಎಲ್ಲಾ ಇಂಡಿಯನ್ ಪ್ಲಾಯ್ವುಡ್‌ಕಂಪನಿ ಕಾರ್ಮಿಕ ಸಂಘಗಳ ಪದಾಧಿಕಾರಿಗಳಿಗೆ ಮನವಿಯೊಂದನ್ನು ನೀಡಿದ್ದಾರೆ. ಪ್ಲಾಯ್ವುಡ್ ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಿ ಈ ಉದ್ಯಮದಲ್ಲಿ ದುಡಿಯುವ ಎಲ್ಲಾ ಕಾರ್ಮಿಕರಿಗೆ ಕರ್ನಾಟಕ ದಾದ್ಯಂತ ಒಂದೇ ರೀತಿಯ ಸಂಬಳ ಮತ್ತಿತರ ಸೇವಾ ಸೌಲಭ್ಯಗಳನ್ನು ಕಲ್ಪಿಸಲು ಸಹಾಯವಾಗಬೇಕು. ಆದ್ದರಿಂದ ಪ್ಲಾಯ್ವುಡ್ ಕಾರ್ಖಾನೆಗಳ ಕಾರ್ಮಿಕರ ಸಂಘದ ಪದಾಧಿಕಾರಿಗಳು ತಾ. 25-12-79ರ ಒಳಗಾಗಿ ಪತ್ರ ಬರೆದು ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು ಅಥವಾ ಭೆಟ್ಟಿಯಾಗಬೇಕೆಂದು ವಿನಂತಿಸಿದ್ದಾರೆ. ವಿಳಾಸ: ಇಂಡಿಯನ್ ಪ್ಲಾಯ್ವುಡ್ ಕಾರ್ಮಿಕರ ಸಂಘ, ಮುತ್ತಸ್ಥಿ ಕಾಂಪೌಂಡ್, ಮಾಳಮಡ್ಡಿ, ಧಾರವಾಡ. ○

## ಬೆಲೆ ಏರಿಕೆ ಹಾಗೂ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಸತ್ಯಾಗ್ರಹ

ಉ. ಕ. ಜಿಲ್ಲೆಯ ದಾಂಡೇಲಿಯಲ್ಲಿ ಜೀವನಾವಶ್ಯಕ ವಸ್ತುಗಳಾದ ಕಟ್ಟಿಗೆ, ಸಕ್ಕರೆ, ಸೀಮೆಎಣ್ಣೆಯಂತಹ ವಸ್ತುಗಳ ಬೆಲೆ ಏರಿಕೆ ಮತ್ತು ಕೃತಕ ಅಭಾವಗಳನ್ನು ವಿರೋಧಿಸಿ, ಅಗತ್ಯ ವಸ್ತುಗಳ ಸರಿಯಾದ ವಿತರಣೆ ಹಾಗೂ ಬೆಲೆ ಏರಿಕೆಯನ್ನು ತಡೆಯಲು ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಸಿ. ಐ. ಟಿ. ಯು. ದಾಂಡೇಲಿ ಘಟಕವು ತಾ.13-12-79ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದೆ. ಉರುವಲಿನ ತವರೂರಾದ ದಾಂಡೇಲಿಯಲ್ಲಿ ಕಟ್ಟಿಗೆಯ ಅಭಾವ ತೋರಿಸಿ ಕ್ವಿಂಟಾಲ್ ಆರು ರೂಪಾಯಿಯಂತೆ ಮಾರಾಟವಾಗುತ್ತಿದ್ದ ಕಟ್ಟಿಗೆಯ ಬೆಲೆ ಕ್ವಿಂಟಾಲ್ ಒಂದಕ್ಕೆ ರೂ. 8-20 ಮಾಡಿದ್ದಾರೆ, ಅಲ್ಲದೆ ರೇಷನ್ ಕಾರ್ಡಿನಲ್ಲಿ ವ್ಯಕ್ತಿ ಒಬ್ಬನಿಗೆ ತಿಂಗಳಿಗೆ 30 ಕೆ.ಜಿ.ಯಂತೆ ನೀಡಲಿರುವ ಈ ಅಲ್ಪ ಕಟ್ಟಿಗೆಯು ಎಲ್ಲಿಗೂ ಸಾಲದಾಗಿದೆ.

ಒಂದು ತಿಂಗಳಿಂದ ನಡೆಯುತ್ತಿರುವ ದಾಂಡೇಲಿ ಪೇಪರ್ ಮಿಲ್ಲಿನ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳಲಿಲ್ಲವಾದ್ದರಿಂದ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ಸರದಿ ಅನ್ನ ಸತ್ಯಾಗ್ರಹವನ್ನು "ವೀರರಾಣಿ ಕಿತ್ತೂರು ಚೆನ್ನಮ್ಮ" ಸರ್ಕಲಿನಲ್ಲಿ ಪ್ರಾರಂಭಿಸಿದ್ದಾರೆ. ಸತ್ಯಾಗ್ರಹವನ್ನು ಯಶಸ್ವಿಗೊಳಿಸಲು ಸಾರ್ವಜನಿಕರು ಸಹಕರಿಸಬೇಕಾಗಿ ವಿನಂತಿಸಿದ್ದಾರೆ. ●

## ಚುನಾವಣಾ ಪ್ರಚಾರದ ಉದ್ಘಾಟನೆ

ಮಂಗಳೂರು ಕ್ಷೇತ್ರದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಪ್ರಚಾರವನ್ನು ತಾ.13-12-79 ರಂದು ಸಂಜೆ ಗಂಟೆ 5ಕ್ಕೆ ಸರಿಯಾಗಿ ಸುಳ್ಯದ ಬಸ್ ನಿಲ್ದಾಣದ ಬಳಿ ಉದ್ಘಾಟಿಸಲಾಯಿತು.

ಕಾಂ. ಸರಸ್ವತಿಯವರ ಕ್ರಾಂತಿ ಗೀತೆಯೊಂದಿಗೆ ಆರಂಭವಾದ ಈ ಸಭೆಯ ಅಧ್ಯಕ್ಷ ಸ್ಥಾನವನ್ನು ಸುಳ್ಯ ಮುನ್ಸಿಪಾಲ್ ಕೌನ್ಸಿಲರ್ ಕಾಂ. ಪಿ. ಕೆ. ಮೂಸನವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ. ಸೂರ್ಯನಾರಾಯಣ ಭಟ್ ಮತ್ತು ಕಾಂ. ನಾರಾಯಣಭಟ್ ರವರು ಮಾತನಾಡಿದರು. ಹರಿಜನ ಮುಖಂಡ ಮತ್ತು ಪುರಸಭಾ ಸದಸ್ಯರಾದ ಕಾಂ. ಕಂಜಿಳ ಮತ್ತು ಇತರ ಪ್ರಮುಖರು ಭಾಗವಹಿಸಿದ್ದರು. ●

# ಮಾರ್ಕ್ಸ್‌ವಾದ ಮತ್ತು ಸಾಮಾಜಿಕ ಪ್ರಜ್ಞೆ

ಆರ್. ಚಂದ್ರ

**ಪ್ರತಿಪಾದ :**

ವಸ್ತುಮೂಲ, ಪ್ರಜ್ಞೆಯು ಅದರ ಪ್ರತಿಸೃಷ್ಟಿ, ಪ್ರಜ್ಞೆಯು ವಸ್ತುವಿನಿಂದ ಹುಟ್ಟಿಬರುವುದು. ಪ್ರಜ್ಞೆಯು ಪರಿಸರದ ಪ್ರತಿಫಲ ಎಂದು ವಸ್ತುವಿಗೂ (matter) ಪ್ರಜ್ಞೆಗೂ (consciousness) ಇರುವ ಕಾರ್ಯಕಾರಣ ಸಂಬಂಧವನ್ನು ವಿವರಿಸುವ ಮಾರ್ಕ್ಸ್‌ನ ಹೇಳಿಕೆಗಳನ್ನು ಅನೇಕ ಸಮಾಜ ಚಿಂತಕರು ಕಟುವಾಗಿ ಟೀಕಿಸುತ್ತಾರೆ. ಸಮಾನ್ಯವಾಗಿ ಅವರ ಆಕ್ಷೇಪಗಳು ಮತ್ತು ಪ್ರತಿವಾದಗಳು ಹೀಗಿವೆ.

ಪ್ರಜ್ಞೆಯು ವಸ್ತುವಿನಿಂದ ಹುಟ್ಟಿಬರುವುದುಎಂಬ ಹೇಳಿಕೆಯೂ ಸಂಕುಚಿತ ದೃಷ್ಟಿಯುಳ್ಳದ್ದಾಗಿದೆ. ಪ್ರಜ್ಞೆ ಮತ್ತು ಪರಿಸರದ ಈ ಸರಳ ಸಮೀಕರಣದಿಂದ ಪ್ರಜ್ಞೆಯ ಸ್ವಾತಂತ್ರ್ಯವನ್ನೇ ಅಲ್ಲಗಳೆದಂತಾಗುವುದು. ಜಡ ವಸ್ತುವು ವಿಕಾಸವಾಗಲಾರದು. ವಸ್ತುವನ್ನು ಅಚೇತನ ಮತ್ತು ಸಚೇತನವೆಂದು ವಿಂಗಡಿಸಿದರೆ ಸಚೇತನ ವಸ್ತುವಿನ ಅಸ್ತಿತ್ವವೇ ಪ್ರಜ್ಞೆ ಎಂದು ತಿಳಿದರೆ ಸತ್ಯಕ್ಕೆ ಸಮೀಪವಾದೀತು. ಪಂಚೇಂದ್ರಿಯಗಳ ಮೂಲಕ ತಿಳಿದುಕೊಳ್ಳುವುದಕ್ಕಿಂತ ಭಿನ್ನವಾದ, ವಿಜ್ಞಾನಕ್ಕೆ ನಿಲುಕದ ಅತೀತ ಸತ್ಯ (Transcendental Truth) ಒಂದಿದೆಯೆಂದೂ ಅದನ್ನು ಶುದ್ಧ ಚೇತನದಿಂದ (Pure Spirit) ಸಾಕ್ಷಾತ್ಕರಿಸಿಕೊಳ್ಳಬಹುದಾಗಿದೆ. ಸತ್ಯ, ಸಾಹಿತ್ಯಗಳನ್ನು ಎಂದೂ ಒಂದು ಸಮುದಾಯ ರಚಿಸಲಾರದು. ಒಂದೊಂದು ಯುಗದಲ್ಲಿ ಒಬ್ಬೊಬ್ಬ ವ್ಯಕ್ತಿಯ ಮೂಲಕ ಅವುಗಳು ಅಭಿವ್ಯಕ್ತಿಸಿಕೊಳ್ಳುವುವು. ಪ್ರಜ್ಞೆಯು ಪರಿಸರದ ಪ್ರತಿಫಲವಾದರೆ, ಒಂದು ಕಾಲದ ಪ್ರಜ್ಞೆಯನ್ನು ಮೀರಿ ಅದರ ವಿರುದ್ಧವೇ ಬಂಡೆದ್ದು ಹೊಸ ಯುಗದ ನಿರ್ಮಾಣವಾಗುತ್ತಿರಲಿಲ್ಲ. ವಿಪರೀತ ವೈಜ್ಞಾನಿಕ ದೃಷ್ಟಿಯ ಮಾರ್ಕ್ಸ್‌ವಾದಿಗಳುವಿಚಾರಸ್ವಾತಂತ್ರ್ಯವನ್ನು ಹರಣ ಮಾಡುತ್ತಾರೆ. ಒಂದು ವರ್ಗದ ಹಿತಕ್ಕಾಗಿ ಸಾಹಿತ್ಯ ಮೀಸಲಾಗಿರಬೇಕೆಂಬ ವಾದವು ಬೌದ್ಧಿಕ ಗುಲಾಮತನವನ್ನೇ ಸ್ಪಷ್ಟಪಡಿಸುವುದು. ಸಾಹಿತಿಗೆ ಪೂರ್ಣ ವ್ಯಕ್ತಿಸ್ವಾತಂತ್ರ್ಯವಿರಬೇಕು.

ಎಲ್ಲಾ ಕಾಲದ ಸಮಾಜ ಚಿಂತಕರೂ ಮೇಲಿನಂತಹ ಆಕ್ಷೇಪಗಳ ಮತ್ತು ಪ್ರತಿವಾದಗಳ ಗುಲ್ಲೆಬ್ಬಿಸಿ, ಕೊನೆಗೂ ತತ್ವಜ್ಞಾನದ ಮೂಲಭೂತವಾದ ಪ್ರಶ್ನೆಗೆ "ಪ್ರಜ್ಞೆಯು ವಸ್ತುವಿನಿಂದ ಉದ್ಭವಿಸಿತೋ ಅಥವಾ ಪ್ರಜ್ಞೆಯಿಂದ ವಸ್ತು ಉದ್ಭವಿಸಿತೋ" ಎನ್ನುವುದಕ್ಕೆ ವೈಜ್ಞಾನಿಕವಾಗಿ ಸಮರ್ಪಕವಾದ ಉತ್ತರ ಸಿಗದೆ, ಭಾವುಕತೆಗೇ ಮಾರು ಹೋಗಿ ಬೌದ್ಧಿಕ ಹೊಣೆಗಾರಿಕೆಯನ್ನೇ ಜಾರಿಸಿಕೊಂಡಿದ್ದಾರೆ!

ಮಾರ್ಕ್ಸ್‌ವಾದ ವಸ್ತು ಮತ್ತು ಪ್ರಜ್ಞೆಗಳಿಗೆ ಸಂಬಂಧಿಸಿದಂತೆ ಏನು ಪ್ರತಿಪಾದಿಸುತ್ತದೆ ಎಂದು ಸಂಕ್ಷಿಪ್ತವಾಗಿ ತಿಳಿಯುವಾ.

**ಮಾರ್ಕ್ಸ್‌ವಾದ :**

ಮಾರ್ಕ್ಸ್‌ನ ದ್ವಂದ್ವಮಾನ ಮತ್ತು ಚಾರಿತ್ರಿಕ ಭೌತವಾದವು (Marx's Dialectical and Historical Materialism) ಅವನ ಕಾಲದ ವರೆಗಿನ ಪ್ರಾಕೃತಿಕ, ವೈಜ್ಞಾನಿಕ, ಚಾರಿತ್ರಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಅನುಭವಗಳನ್ನೆಲ್ಲಾ ಬಳಸಿಕೊಂಡಿರುವುದರಿಂದ, ಅದು ವಿಶ್ವ ವೈಶಾಲ್ಯ ದೃಷ್ಟಿಯುಳ್ಳದ್ದಾಗಿದೆ. ಪ್ರಕೃತಿಯನ್ನು, ಸಮಾಜವನ್ನು ಮಾರ್ಕ್ಸ್ ತಿಳಿಯಲು ಬಳಸಿದ ಮಾರ್ಗವು ಅತ್ಯಂತ ವೈಜ್ಞಾನಿಕವಾಗಿದ್ದು ಅಹಂಕಾರ ಪೂರ್ವಾಗ್ರಹಗಳಿಂದ ಪೀಡಿತವಾಗಿಲ್ಲ. ಪ್ರಕೃತಿಯು ಸತ್ಯ, ಅನಾದಿ, ಅನಂತ, ವಾಸ್ತವ ಹಾಗೂ ಸ್ವತಂತ್ರವೆಂದೂ ಪ್ರಜ್ಞೆಯು ಅದರ ಪ್ರತೀಕವೆಂದೂ ತೋರಿಸಿಕೊಟ್ಟು ಮಾರ್ಕ್ಸ್‌ವಾದವು ತತ್ವಶಾಸ್ತ್ರದ ಜಟಿಲ ಸಮಸ್ಯೆಯನ್ನು ಬಗೆಹರಿಸಿದೆ. ಮಾನವನು ತನ್ನ ಪ್ರಜ್ಞೆಯಿಂದ ಪ್ರಕೃತಿಯ, ಸಮಾಜದ ಸಕಲ ನಿಯಮಾವಳಿಗಳನ್ನು ತಿಳಿಯಬಹುದೆಂದೂ, ಸಧ್ಯ ತಿಳಿಯಬಹುದಾದ ಮತ್ತು ತಿಳಿಯಬೇಕಾದ ವಿಷಯಗಳು ಇನ್ನೂ ತಿಳಿಯದೇಇರಬಹುದಾದರೂ, ತಿಳಿಯಲು ಸಾಧ್ಯವಾದುದೇನೂ ಇಲ್ಲವೆಂದೂ ಮಾರ್ಕ್ಸ್ ಸ್ಪಷ್ಟಪಡಿಸಿ ಮಾನವನ ಅನಂತ ಶಕ್ತಿಯನ್ನು ತೋರಿಸಿಕೊಟ್ಟನು.

ಪ್ರಕೃತಿಯ, ಸಮಾಜದ ಪ್ರತಿಯೊಂದು ಆಗುಹೋಗುಗಳೂ ಪರಸ್ಪರ ಸಂಬಂಧವುಳ್ಳವುಗಳೆಂದೂ, ಉದ್ದೇಶಪೂರಿತವಾದವುಗಳೆಂದೂ, ಒಂದಾದ ಮೇಲೊಂದು ಸ್ಥಿತಿಯತ್ತ ಬದಲಾವಣೆ, ಬೆಳವಣಿಗೆ ಮತ್ತು ವಿಕಾಸ ಹೊಂದುತ್ತವೆಯೆಂದೂ ಮಾರ್ಕ್ಸ್‌ವಾದವು ತಿಳಿಸುತ್ತದೆ. ಇಂತಹ ಬದಲಾವಣೆಗಳೂ ಬೆಳವಣಿಗೆಗಳೂ ಅಪರಮುಖವಾಗಿರದೆ ಊರ್ಧ್ವ ಮುಖವಾಗಿರುವುವೆಂದೂ, ಪ್ರಗತಿಪರವಾದವುಗಳೆಂದೂ, ಕೆಲವೊಮ್ಮೆ ಅಪೂರ್ವ ಜಿಗಿತ (Leap)ವುಳ್ಳವುಗಳೆಂದೂ ತಿಳಿಸುತ್ತದೆ. ಬದಲಾವಣೆಗಳೂ ಬೆಳವಣಿಗೆಗಳೂ ಸರಳತೆಯಿಂದ ಸಂಕೀರ್ಣತೆಯನ್ನು ತಳೆಯುವುವೆಂದೂ, ಗಾತ್ರದಿಂದ ಗುಣವಿಶೇಷಗಳನ್ನು ಪಡೆಯುವುವೆಂದೂ ತಿಳಿಸುತ್ತದೆ. ಪ್ರಗತಿಯು ಪ್ರಕೃತಿಯ, ಸಮಾಜದ, ವ್ಯಕ್ತಿಯ ಹಲವಾರು ವೈರುಧ್ಯಗಳ ಪರಸ್ಪರ ಹೋರಾಟವೆಂದೂ, ವೈರುಧ್ಯಗಳು ಅವವುಗಳಲ್ಲೇ ಬೀಜರೂಪದಲ್ಲಿ ಅಡಕವಾಗಿದ್ದು, ಬೆಳವಣಿಗೆಯ ಪ್ರತಿಹಂತದಲ್ಲೂ ಸ್ಪಷ್ಟವಾಗಿ ವ್ಯಕ್ತವಾಗುವುದೆಂದೂ ಮಾರ್ಕ್ಸ್‌ವಾದವು ಸಾರುತ್ತದೆ.

ಮೇಲಾಗಿ, ಪ್ರಕೃತಿಯ ಮತ್ತು ಸಮಾಜದ ಆಗುಹೋಗುಗಳು ಅವುಗಳ ವಿಕಾಸ ನಿಯಮಗಳಿಗನುಗುಣವಾಗಿ ಮಾನವನ ಪ್ರಜ್ಞೆಯಿಂದ ಸ್ವತಂತ್ರವಾಗಿ ಸಾಗುತ್ತಿವೆ. ಆದರೆ, ಮಾನವನು ತನ್ನ ಪ್ರಜ್ಞೆಯ ಸಹಾಯದಿಂದ, ವೈಜ್ಞಾನಿಕ ದೃಷ್ಟಿಯಿಂದ-ಪರಿಶೀಲನೆ, ಪರೀಕ್ಷೆ, ಅನ್ವೇಷಣೆ, ಪ್ರತ್ಯಕ್ಷಾನುಭವಗಳಿಂದ ಪ್ರಕೃತಿಯ ಹಾಗೂ ಸಮಾಜದ ಆಗುಹೋಗುಗಳನ್ನು ತನ್ನ ಐಹಿಕಾಭ್ಯುದಯಗಳಿಗೆ ಅನುವು ಮಾಡಿಕೊಳ್ಳಬಹುದು. ಬದಲಾವಣೆಯಲ್ಲಿ, ಬೆಳವಣಿಗೆಯಲ್ಲಿ ತೀವ್ರತೆಯನ್ನು ಸಾಧಿಸಬಹುದು. ಈ ದಿಸೆಯಲ್ಲಿ ಮಾನವನ ಇತಿಹಾಸದ ಮೊದಲಿನಿಂದ ಇದುತನಕವೂ ಪ್ರಪಂಚದಾದ್ಯಂತ ಹೋರಾಟ ನಡೆಯುತ್ತಲೇ ಇದೆ. ಅದಕ್ಕೆಂದೇ, "ತತ್ವಜ್ಞಾನಿಗಳ ಕೆಲಸ ಪ್ರಪಂಚ ಮತ್ತು ಸಮಾಜವನ್ನು ಅರ್ಥಮಾಡಿಕೊಳ್ಳುವುದು ಮಾತ್ರವಲ್ಲ, ಅದನ್ನು ಮಾನವನ ಅಭ್ಯುದಯಕ್ಕಾಗಿ ಬದಲಾಯಿಸಿಕೊಡುವುದು" ಎಂದು ಮಾರ್ಕ್ಸ್ ತತ್ವಜ್ಞಾನಿಗಳಿಗೆ ಸಮಾಜ ಚಿಂತಕರಿಗೆ ಅತ್ಯಂತ ಪ್ರಭಾವಕಾರಿಯಾದ ಒಂದು ಸವಾಲು ಹಾಕಿರುವುದು.

ಮುಖ್ಯವಾಗಿ, ಮಾರ್ಕ್ಸ್‌ವಾದದ ಸತ್ಯತೆಯು ಕೇವಲ ಅವನು ಬರೆದ ಪುಸ್ತಕಗಳಿಗೂ ಮಾಡಿದ ಭಾಷಣಗಳಿಗೂ ಸೀಮಿತವಾಗಿಲ್ಲ. ಅದರ ಬದಲು, ಅವನ ಕಾಲದಲ್ಲಿ ಅವನೂ ಅವನ ಅನುಯಾಯಿಗಳೂ ರೈತರ, ಕಾರ್ಮಿಕರ ಮತ್ತು ಅವರಿಗೆ ಸಹಾನುಭೂತಿ ನೀಡುತ್ತಿದ್ದ ಬುದ್ಧಿಜೀವಿಗಳ ಸುಸಂಘಟನೆಯಿಂದ ಆಗಿನ ಸಮಾಜದ ತಳಪಾಯ (Base) ಮತ್ತು ಮೇಲ್ ರಚನೆ(Superstructure)ಗಳನ್ನು ಖಡಾಖಂಡಿತವಾಗಿ ಎದುರಿಸಿ ಮುಂದಿನ ಕ್ರಾಂತಿ, ಪ್ರಗತಿಗಳಿಗೆ ಭದ್ರ ತಳಹದಿಯನ್ನು ಹಾಕಿರುವುದರಲ್ಲಿ ಮಾರ್ಕ್ಸ್‌ವಾದದ ನಿಜವಾದ ಶಕ್ತಿ ಇರುವುದು. ಅವನ ತತ್ವವನ್ನು ಸಮಾಜದ ಪ್ರಗತಿಪರ ಪುರೋಗಾಮಿ ಅಸಂಖ್ಯಾತ ಜನಸಮುದಾಯ, ಅವರ ಪಕ್ಷ, ಧುರೀಣರರು ಲೆನಿನ್ ಆದಿಯಾಗಿ ಮುಂದೆ ಅನುಷ್ಠಾನಕ್ಕೆ ತಂದುದರಲ್ಲಿ ಮಾರ್ಕ್ಸ್‌ವಾದದ ನಿಜವಾದ ಶಕ್ತಿಇರುವುದು. ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮ ವಿಚಾರಗಳು ಬೆಳೆಯುತ್ತಾ ಹೋದಂತೆ ಮಾರ್ಕ್ಸ್‌ವಾದದ ಸತ್ಯವೂ ಅದರ ಅನುಷ್ಠಾನದಿಂದ ಹೆಚ್ಚು ಹೆಚ್ಚು ಸ್ಪಷ್ಟವಾಗುವುದು, ವೃದ್ಧಿಯಾಗುವುದು, ಅದನ್ನು ಯಾರೂ ಪ್ರಶ್ನಿಸಬಹುದು, ಹತ್ತಿಕ್ಕಲು ಪ್ರಯತ್ನಿಸಬಹುದು. ಆದರೆ, ಒಮ್ಮೆ ಅದು ಸಮಾಜದ ಮಾನವನ ಪ್ರಜ್ಞೆಗೆ ಬಂತೆಂದರೆ, ಅದು ದಿವ್ಯಶಕ್ತಿಯಾಗಿ ಜ್ಯೋತಿಯಾಗಿ ಉಳಿಯುವುದು ಅದರ ರಕ್ಷಣೆಗೆ ಇಡೀ ಸಮಾಜವೇ ಎದ್ದು ಬದ್ಧಕಂಕಣವಾಗುವುದು. ಹೀಗಾಗಿ, ಮಾರ್ಕ್ಸ್‌ವಾದದ ಸತ್ಯವು ಜನಕೋಟಿಯ ಕಲ್ಯಾಣ ಸಾಧನೆಗೆ ಸಮೀಪವಾಗಿರುವುದು.

ಮಾರ್ಕ್ಸ್‌ವಾದವು ಹೇಗೆ ಪೊಳ್ಳು ಆದರ್ಶವಾದವಲ್ಲವೋ, ಹಾಗೆಯೇ ನಿರ್ಜೀವ-ಹೇಸಿಗೆ ಭೌತವಾದ (vulgar materialism)ವೂ ಅಲ್ಲ. ವಸ್ತು-ಪ್ರಜ್ಞೆ, ತಳಪಾಯ-ಮೇಲ್ ರಚನೆ, ಸಮಾಜ-ವ್ಯಕ್ತಿ ಈ ದ್ವಂದ್ವಗಳಲ್ಲಿ ಮೊದಲಿನದು ಮೂಲವೆಂದೂ ಎರಡನೆಯದು ಅದರ ಪ್ರತಿಸೃಷ್ಟಿಯೆಂದೂ ಹೇಳಿದಾಗ ಅವುಗಳ ಕಾರ್ಯಕಾರಣ ಸಂಬಂಧವನ್ನು ಸಿದ್ಧಪಡಿಸಿದಂತಾಯಿತೇ ಹೊರತು ಅವುಗಳೆರಡೂ ಒಂದೇ ಎಂದಾಗಲೀ, ಎರಡನೆಯದರ ಸ್ವಾತಂತ್ರ್ಯವನ್ನು ಅಲ್ಲಗಳೆದಂತಾಗಲೀ ಆಗಲಿಲ್ಲ. ಅವವುಗಳು ವಿಕಾಸವಾಗುತ್ತಿರುವಾಗ ಪ್ರತಿಯೊಂದು ಹಂತದಲ್ಲೂ ಅವವುಗಳ ಅನ್ಯೋನ್ಯತೆ ಹಾಗೂ ಐಕ್ಯತೆಯ ಸಾಧನೆಗೆ ವೈರುಧ್ಯಗಳ ನಿವಾರಣೆಗೆ ಬೆಳವಣಿಗೆಗೆ ಹೋರಾಡುವಲ್ಲಿ ಈ ಕಾರ್ಯಕಾರಣಗಳ ಸಂಬಂಧಗಳ ಅರಿವು ಇರಬೇಕಾದುದು ಅತ್ಯಗತ್ಯ. ಈ ದೃಷ್ಟಿಯಲ್ಲಿ ಮಾರ್ಕ್ಸ್‌ವಾದವು ಪ್ರಜ್ಞೆಯ, ಮೇಲ್‌ರಚನೆಯ ಮತ್ತು ವ್ಯಕ್ತಿಯ ಸ್ವಾತಂತ್ರ್ಯದ ಬಗ್ಗೆ ತಳೆದ ನಿಲುವನ್ನು ಸ್ವಲ್ಪ ವಿವರವಾಗಿ ವಿಚಾರಿಸುವಾ.

**ಪ್ರಜ್ಞೆ:**

ಎಲ್ಲಾ ವಸ್ತುಗಳೂ ತಮ್ಮ ತಮ್ಮ ಬಾಹ್ಯಾಂತರಗಳ ಪ್ರಭಾವಗಳಿಗನುಗುಣವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾ ಪುನಃರಚನೆಯ ಶಕ್ತಿಯನ್ನು ಪಡೆದಿವೆ. ಆದರೆ ಈ ಪ್ರತಿಕ್ರಿಯೆಯ ಸ್ವರೂಪ ಸ್ವಭಾವ ಅಚೇತನ, ಸಚೇತನ ಮತ್ತು ಮಾನವ ವಸ್ತುಗಳಲ್ಲಿ ಬೇರೆ ಬೇರೆಯಾಗಿವೆ. ಅಚೇತನದಲ್ಲಿ ಅದು ಅವ್ಯಕ್ತವಾಗಿರುವುದು. ಸಚೇತನದಲ್ಲಿ ಬೇಕಾದ್ದನ್ನು ಆರಿಸಿ ಬೇಡವಾದ್ದನ್ನು ತ್ಯಜಿಸುವ ಸಕ್ರಿಯ ಪ್ರತಿಕ್ರಿಯೆ ಆಗಿರುವುದು. ಸಚೇತನ ಮಾನವನಲ್ಲಿ ಸಕ್ರಿಯವಾಗಿಯೂ ಬುದ್ಧಿಪೂರ್ವಕವಾಗಿಯೂ ಪ್ರತಿಕ್ರಿಯೆಗಳಾಗುವುವು. ಮಾನವನು ಪರಿಸರಕ್ಕೆ ಹೊಂದಿಕೊಳ್ಳುವುದು ಮಾತ್ರವಲ್ಲದೆ, ಪರಿಸರದ ಕುರಿತು ತನಗಿರುವ ಜ್ಞಾನದಿಂದ ಪ್ರಜ್ಞೆಯಿಂದ ಅದನ್ನು ತನಗಾಗಿ ಪರಿವರ್ತಿಸಬಲ್ಲವನಾಗಿದ್ದಾನೆ.

ಅಚೇತನ ವಸ್ತುವು ಸಚೇತನವಾಗಿಯೂ, ಸಚೇತನ ವಸ್ತುವು ಮಾನವನಂತಹ ಬೌದ್ಧಿಕ ವಸ್ತುವಾಗಿಯೂ ಮಾರ್ಪಾಟಾದ ಪ್ರಾಕೃತಿಕ ಮತ್ತು ಸಾಮಾಜಿಕ ವಿಕಾಸದ ಚರಿತ್ರೆಯು ಇದುತನಕದ ಎಲ್ಲಾ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸತ್ಯಾನ್ವೇಷಣೆಗಳಿಂದ ಸ್ಫುಟವಾಗಿದೆ. ಸಚೇತನ ವಸ್ತುಗಳು ಜೀವಿಗಳ ಬೆಳವಣಿಗೆಯ ಪ್ರತಿಫಲವಾದರೆ, ಬೌದ್ಧಿಕ ಮಾನವನು ಚಾರಿತ್ರಿಕ ಮತ್ತು ಸಾಮಾಜಿಕ ಬೆಳವಣಿಗೆಯ ಪ್ರತಿಫಲವಾಗಿದ್ದಾನೆ.

ಮಾನವನ ಪ್ರಜ್ಞೆ, ವಿಚಾರಾತ್ಮಕವೂ, ಕ್ರಿಯಾತ್ಮಕವೂ, ಭಾವನಾತ್ಮಕವೂ ಆಗಿರುವುದು. ಇತರ ಸಚೇತನ ವಸ್ತುಗಳ ಪ್ರಜ್ಞೆಯು ನೇರವೂ ವಾಸ್ತವಿಕವೂ ಆಗಿರುವುದು. ಮಾನವನು ವಿವೇಕ ವಿಚಾರಉಳ್ಳವನು. ಅವನ ಸಂಗೀತಪ್ರಿಯ ಕಿವಿ, ಸೌಂದರ್ಯಪ್ರಿಯ ಕಣ್ಣು, ರುಚಿಸ್ವಾದಿಸುವ ನಾಲಿಗೆ, ಸುವಾಸನೆಯನ್ನು ಸವಿಯುವ ಮೂಗು, ಸ್ಪರ್ಶಾನಂದವನ್ನು ಅನುಭವಿಸಬಲ್ಲ ಚರ್ಮ-ಈ ಪಂಚೇಂದ್ರಿಯಗಳ ಬೆಳವಣಿಗೆಯೂ, ಈ ಇಂದ್ರಿಯಾನುಭವಗಳನ್ನು ಪ್ರವಹಿಸುವ ಮಿದುಳೂ, ವಸ್ತುವಿನ ಅತ್ಯಂತ ಸೂಕ್ಷ್ಮ ಕ್ಲಿಷ್ಟ ಸಂಯೋಜನೆಯಾಗಿದ್ದು ಇಡೀ ವಿಶ್ವರೂಪದ ಬೃಹತ್ ಚರಿತ್ರೆಯ ಪ್ರತಿಫಲವೆಂದೇ ಮಾರ್ಕ್ಸ್ ಹೇಳುತ್ತಾನೆ.

ವಿಚಾರಗಳೂ ಭಾವನೆಗಳೂ ವಸ್ತು ಮತ್ತು ದೈಹಿಕ ಚಟುವಟಿಕೆಗಳಿಗೆ ನಿಕಟ ಸಂಬಂಧ ಹೊಂದಿದ್ದರೂ, ಮಾರ್ಕ್ಸ್‌ವಾದವು ಅವುಗಳನ್ನೂ ಭೌತಿಕ ಚಟುವಟಿಕೆಗಳೆಂದು ಹೇಳುವ ಹೇಸಿಗೆ ಭೌತವಾದವಲ್ಲ. (Vulgar materialism) ಹಾಗೆಯೇ, ವಿಚಾರಗಳೂ ಭಾವನೆಗಳೂಇಂದ್ರಿಯಾತೀತವೆಂದೂ, ಅತೀತಸತ್ಯವೆಂದೂ (Transcendental Truth), ಶುದ್ಧಚೇತನ (Pure idea, spirit)ದಿಂದ ಅವುಗಳನ್ನು ಸಾಕ್ಷಾತ್ಕರಿಸಿಕೊಳ್ಳಬಹುದೆಂದೂ ಪ್ರತಿಪಾದಿಸುವುದನ್ನು ಮಿದುಳೇ ಇಲ್ಲದ ತತ್ವಜ್ಞಾನ (Brainless philosophy) ಎಂದು ಲೆನಿನ್ ಘಂಟಾಘೋಷವಾಗಿ ಹೇಳಿದ್ದಾನೆ.

ಮಾರ್ಕ್ಸ್‌ನ ಅತ್ಯಂತ ನಿಕಟವರ್ತಿ ಏಂಗಲ್ಸ್ ಹೇಳುವಂತೆ, ಶ್ರಮಶಕ್ತಿಯೇ ಮಾನವನ ಸೃಷ್ಟಿಗೆ ಕಾರಣವಾಯಿತು. ಶ್ರಮವು ವಸ್ತು ಪೌಲ್ಯವನ್ನು ಸೃಷ್ಟಿಸುವ, ವೃದ್ಧಿಸುವ ನಿರಂತರ ಕಾರ್ಯದಲ್ಲಿಯೇ ಪ್ರಜ್ಞೆಯ ಆವಿರ್ಭಾವವೂ ಆಯಿತು. ಶ್ರಮವು ಮಾನವನಿಗೆ ಆಹಾರ, ವಸತಿ, ಬಟ್ಟೆ, ರಕ್ಷಣೆಗಳನ್ನೀಯಬಲ್ಲ ಅವನ ಅತ್ಯಂತ ಆಪ್ತವೂ ಅನಿವಾರ್ಯವೂ ಆದ ಸೊತ್ತು. ಚತುಷ್ಪಾದಿ ಕಪಿಮಾನವನು ಸಹಸ್ರಾರು ವರ್ಷಗಳ ಹಿಂದೆ ನೆಟ್ಟಗೆ ನಿಲ್ಲಲು ಅಭ್ಯಸಿಸಿದಂದಿನಿಂದ ಅವನ ಮುಂದಿನ ಎರಡು ಕಾಲುಗಳು ನಡೆಯಲು ಅಗತ್ಯವಿಲ್ಲದೆ ತನ್ನ ಬೆಳವಣಿಗೆಗೆ ಶ್ರಮಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾದ ಕೈಗಳಾದುದು ಅತ್ಯಂತ ಮಹತ್ವದ ವಿಷಯ ಅಂದಿನಿಂದ ಶ್ರಮಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮಾನವನು ಕಲ್ಲುಗಳಿಂದ ಲೋಹಗಳಿಂದ ಉಪಕರಣಗಳನ್ನು ಮಾಡಿ ಬಳಸಿಕೊಳ್ಳುವುದರ ಮೊದಲಾಗಿ, ಯಂತ್ರೋಪಕರಣಗಳನ್ನು ಉಪಯೋಗಿಸುವಷ್ಟು ಪ್ರಗತಿಯನ್ನು ಸಾಧಿಸಿದ್ದಾನೆ. ಮಾನವನ ಶ್ರಮಶಕ್ತಿ ಬೆಳೆದಂತೆ ಅವನ ಬುದ್ಧಿಶಕ್ತಿಯೂ ಪ್ರಜ್ಞೆಯೂ ಬೆಳೆಯಿತು.

ಅವನ ಬುದ್ಧಿಶಕ್ತಿ ಪ್ರಜ್ಞೆ ಬೆಳೆದಂತೆ ಅವನ ಶ್ರಮಶಕ್ತಿಯೂ ಬೆಳೆಯಿತು.

ಶ್ರಮವು ಪ್ರಕೃತಿಯೊಂದಿಗೆ ಹೋರಾಡಿ ಮಾನವನ ಬೆಳವಣಿಗೆಗೆ ವಸ್ತುಮೌಲ್ಯಗಳನ್ನು ಸೃಷ್ಟಿಸಲು ಹೆಚ್ಚಿಸಲು ಸಾಮೂಹಿಕವಾಗಿಯೇ ಬೇಕಾಯಿತು. ಈ ಪ್ರಜ್ಞೆಯನ್ನು ಪರಸ್ಪರ ವಿನಿಮಯ ಮಾಡಲು ಸಾಮೂಹಿಕ ಭಾಷೆಯು ಹುಟ್ಟಿಕೊಂಡಿತು. ಹೀಗಾಗಿ ಮಾರ್ಕ್ಸ್‌ನ ದ್ವಂದ್ವಮಾನ ಭೌತವಾದವು ಮಾನವನ ಪ್ರಜ್ಞೆಯನ್ನೂ ಅದರ ಸ್ವತಂತ್ರ ಪಾತ್ರವನ್ನೂ ನಿರಾಕರಿಸುವುದಿಲ್ಲ. ಬದಲು, ಒಮ್ಮೆ ಅದು ಸಾಮೂಹಿಕ ಸಾಮಾಜಿಕ ಪ್ರಜ್ಞೆಯಾದೊಡನೆ, ಪ್ರಕೃತಿಯ ಸಮಾಜದ ಬದಲಾವಣೆಗೆ ಬೆಳವಣಿಗೆಗೆ ಸಕ್ರಿಯವಾಗಿ ನೆರವಾಗಬಲ್ಲದು. ಈ ದೃಷ್ಟಿಯಿಂದಲೇ ಲೆನಿನ್ 'ಮಾನವನ ಪ್ರಜ್ಞೆ ವಾಸ್ತವ ಜಗತ್ತನ್ನು ಪ್ರತಿಬಿಂಬಿಸುವುದು ಮಾತ್ರವಲ್ಲದೆ ಸೃಷ್ಟಿಸುವುದು' ಎಂದು ಹೇಳಿದ್ದಾನೆ. ಅರ್ಥಾತ್, ಮಾನವ ಪ್ರಜ್ಞೆಯು ವಾಸ್ತವ ಜಗತ್ತನ್ನು ಸರಿಯಾಗಿ ಪ್ರತಿಬಿಂಬಿಸಲು ಪರಿಪುಷ್ಟವಾಗಿದ್ದರೆ ಜೀವನವನ್ನು ಮಾರ್ಪಡಿಸಲು ಮಾನವನ ಸೃಷ್ಟ್ಯಾತ್ಮಕ ಕಾರ್ಯಕ್ಕೆ ಯೋಗ್ಯ ಮಾರ್ಗದರ್ಶಿಯಾದೀತು.

**ಸಾಮಾಜಿಕ ಪ್ರಜ್ಞೆ ಮತ್ತು ಸತ್ಯ:**

ವಸ್ತು ಮೂಲ ಪ್ರಜ್ಞೆ ಅದರ ಪ್ರತಿಸೃಷ್ಟಿ ಎಂಬ ತತ್ವವನ್ನೇ ಸಮಾಜದ ಬೆಳವಣಿಗೆಯ ಸೂತ್ರಗಳಿಗೆ ಅನ್ವಯಿಸಿದಾಗ ಶ್ರಮಶಕ್ತಿಯ ಬೆಳವಣಿಗೆಯೇ ಸಮಾಜದ ಪ್ರಗತಿಗೆ ಕಾರಣವೆಂದು ತಿಳಿಯುವುದು. ಶ್ರಮಶಕ್ತಿಯು ಉತ್ಪಾದನೆಯ ಸಾಧನ ವಿಧಾನ ಮತ್ತು ಸಂಬಂಧಗಳನ್ನು ಹೊಂದಿಕೊಂಡಿದೆ. ಇದನ್ನು ವ್ಯಕ್ತಪಡಿಸುವ ವ್ಯವಸ್ಥೆಯೇ ಸಮಾಜದ ತಳಪಾಯವೆಂದೂ (Base), ರಾಜಕೀಯ, ಮಿಲಿಟರಿ, ಕಾನೂನು, ಆಡಳಿತ, ನ್ಯಾಯಾಂಗ, ವಿಜ್ಞಾನ, ಸಾಹಿತ್ಯ, ಕಲೆ, ತತ್ವಜ್ಞಾನಗಳು ಸಮಾಜದ ಮೇಲ್‌ರಚನೆಗಳೆಂದೂ (Superstracture) ತಿಳಿಯುವುದು. ಸಮಾಜದ ತಳಪಾಯವು ಬದಲಾದಂತೆ ಮೇಲ್‌ರಚನೆಗಳಲ್ಲೂ ಬದಲಾಗಲು ಉತ್ಪಾದನೆ ಮತ್ತು ವಿತರಣೆಗಳ ಸಾಮರಸ್ಯತೆ ಸಾಧಿಸಲು ಸತತ ಹೋರಾಟ ನಡೆಯುವುದೆಂದೂ ಮಾರ್ಕ್ಸ್‌ನ ಚಾರಿತ್ರಿಕ ಭೌತವಾದವು ಖಚಿತಪಡಿಸುತ್ತದೆ.

ಪ್ರಾಚೀನ ಸಮತಾವಾದಿ ಸಮಾಜ (primitive communism) ರಚನೆಯಿಂದ ದಾಸ್ಯ ಸಮಾಜ (Slave society), ಅಲ್ಲಿಂದ ಪಾಳೆಯಗಾರಿ ಸಮಾಜ (Fuedal society), ಮುಂದೆ ಬಂಡವಾಳಶಾಹಿ ಸಮಾಜ (Capitalist society), ಆ ಮೇಲೆ ವೈಜ್ಞಾನಿಕ ಸಮಾಜವಾದಿ ಹಾಗೂ ಸಮತಾವಾದಿ ಸಮಾಜಗಳ (scientific socialist and communist societies) ರಚನೆಯು ಪ್ರತಿಯೊಂದು ಪ್ರಮುಖ ಹಂತದಲ್ಲಿಯೂ ಭೌತಿಕ ಮತ್ತು ತಾತ್ವಿಕ ತಳಹದಿಗಳ ಮೇಲೆ ಈ ದಿಸೆಯಲ್ಲಿ ಸತತ ಹೋರಾಟ ನಡೆಯುತ್ತಲೇ ಇದೆ. ಇಂತಹ ಹೋರಾಟಗಳು ಸಮಾಜದ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳನ್ನು ವ್ಯಾಪಿಸಿವೆ. ಪ್ರತಿಯೊಂದು ಸಮಾಜ ಪದ್ಧತಿಗೂ ತನ್ನ ಭೌತಿಕ ಆರ್ಥಿಕ ತಳಪಾಯಗಳಿಗನುಗುಣವಾಗಿ ರಾಜಕೀಯ ಹಾಗೂ ಸಾಂಸ್ಕೃತಿಕ ಮೇಲ್‌ರಚನೆಗಳಿವೆ. ಆದರೆ, ಇವುಗಳು ತಮ್ಮ ತಳಪಾಯದ ಕೇವಲ ಪ್ರತಿಬಿಂಬವಾಗಿರದೆ, ಕೆಲವೊಮ್ಮೆ ಅವುಗಳದೇ ಆದ ಪ್ರಗತಿ ಅಥವಾ ವಿಗತಿಗುಣಶಕ್ತಿಗಳಿದ್ದು ಸಮಾಜ ವಿಕಾಸದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇವುಗಳ ಒಟ್ಟು ಪ್ರಜ್ಞೆಯೇ ಸಾಮಾಜಿಕ ಪ್ರಜ್ಞೆ. (social consciousness).

ವರ್ಗಗಳಿಂದ ವಿಚ್ಛೇದಿತವಾದ ಸಮಾಜದಲ್ಲಿ ಪ್ರಜ್ಞೆಯು ಯಾವ ಪ್ರಕಾರದ್ದೇ ಆಗಿರಲಿ, ಅನಿವಾರ್ಯವಾಗಿ ಅದು ವರ್ಗಹಿತಾಸಕ್ತಿಯ ಲಕ್ಷಣಗಳನ್ನು ಹೊಂದಿರುವುದು. ಯಾಕೆ?

ಪರಸ್ಪರ ವಿರುದ್ಧ ಹಿತಾಸಕ್ತಿಗಳಿರುವ ಸಮಾಜದಲ್ಲಿ ವರ್ಗಗಳು ಅಸಮಾನತೆಯ ಬಲಾಬಲಗಳನ್ನು ಹೊಂದಿದ್ದು, ಭಿನ್ನ ಭಿನ್ನವಾದ ಸಾಮಾಜಿಕ ಗುರಿಧೋರಣೆಗಳನ್ನು ತಳೆದಿರುತ್ತವೆ. ಪ್ರತಿಯೊಂದು ವರ್ಗವೂ ತನ್ನ ನಿರ್ದಿಷ್ಟವಾದ ವಿಚಾರ ಪ್ರಣಾಳಿಕೆಯಿಂದ ತನ್ನ ಹಿತಾಸಕ್ತಿಗಳನ್ನೂ ಸ್ಥಾನಮಾನಗಳನ್ನೂ ರಕ್ಷಿಸಿಕೊಳ್ಳುವುದಲ್ಲದೆ ತನ್ನ ಗುರಿಧೋರಣೆಗಳನ್ನು ಸಾಧಿಸಿಕೊಳ್ಳುತ್ತಾ ಪ್ರತಿಸ್ಪರ್ಧಿ ವರ್ಗವನ್ನು ಎದುರಿಸುವುದು. ಉದಾಹರಣೆಗೆ, ಬಂಡವಾಳಶಾಹೀ ತತ್ವಜ್ಞಾನವು ಖಾಸಗೀ ಬಂಡವಾಳ ಮತ್ತು ಆಸ್ತಿಯು ಚಿರಂತನವೂ ಸ್ವಾಭಾವಿಕವೂ ದೈವದತ್ತವೂ ಎಂದು ಸಾಧಿಸಿ ಶೋಷಣೆಯನ್ನು ಚಿರಸ್ಥಾಯಿಯನ್ನಾಗಿ ಮಾಡುವುದು. ಆದರೆ, ಶ್ರಮಜೀವಿಯ ತತ್ವಜ್ಞಾನವು ಬಂಡವಾಳಶಾಹಿ ಪದ್ಧತಿಯನ್ನು ಕಿತ್ತೊಗೆದು ಸಮಾಜವಾದ ಮತ್ತು ಸಮತಾವಾದ ಸಮಾಜವನ್ನು ನಿರ್ಮಿಸಿ ವರ್ಗವೈಷಮ್ಯ ಮತ್ತು ಶೋಷಣೆಯ ಹೇಳಹೆಸರಿಲ್ಲದಂತೆ ಮಾಡಲು ಪಣತೊಟ್ಟಿದೆ. ಅದಕ್ಕೆಂದೇ ಸಮಾಜದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ಶ್ರಮಿಕ ವರ್ಗವು ತನ್ನದೇ ಗುಣ ವಿಶಿಷ್ಟವಾದ ಸಮಾಜವಾದದ ತತ್ವ ಪ್ರಣಾಳಿಕೆಯ ಅಗತ್ಯತೆಯನ್ನು ಕಾಣುತ್ತದೆ. ಹಾಗಾದರೆ, ತತ್ವಜ್ಞಾನಕ್ಕೂ ಸತ್ಯಕ್ಕೂ ಇರುವ ಸಂಬಂಧವೇನು? ಸತ್ಯ ಯಾವುದು?

ತಾತ್ವಿಕತೆಯನ್ನು (ideology) ಅದರನೈಜಚಾರಿತ್ರಿಕದೃಷ್ಟಿಕೋಣದಿಂದ ಪರಿಶೀಲಿಸಬೇಕೆಂದೂ ಅದು ಯಾವ ವರ್ಗದ ಹಿತಾಸಕ್ತಿಯನ್ನು ಪ್ರತಿನಿಧಿಸುವುದೆಂದು ತಿಳಿಯಬೇಕೆಂದೂ ಮಾರ್ಕ್ಸ್‌ವಾದವು ಪ್ರತಿಪಾದಿಸುವುದು. ಎಲ್ಲಿಯವರೆಗೆ ಒಂದು ವರ್ಗವು ಸಮಾಜದ ಬೆಳವಣಿಗೆಗೆ ಪ್ರಗತಿಪರ ಪಾತ್ರವನ್ನು ವಹಿಸುವುದೋ, ಎಲ್ಲಿಯವರೆಗೆ ಆ ವರ್ಗದ ಹಿತಾಸಕ್ತಿಗಳು ವಾಸ್ತವ ಸನ್ನಿವೇಶದ ಬೆಳವಣಿಗೆಗೆ ಹೊಂದಿಕೊಳ್ಳುವುವೋ, ಅಲ್ಲಿಯವರೆಗೆ ಆ ತಾತ್ವಿಕತೆಯಲ್ಲಿ ಸತ್ಯ ಇರುವುದು. ಆದರೆ, ಯಾವಾಗ ಒಂದು ವರ್ಗವು ತನ್ನ ಪ್ರಗತಿಪಾತ್ರ ಬರಿದು ಮಾಡಿಕೊಳ್ಳುವುದೋ ಮತ್ತು ಯಾವಾಗ ಅದರ ಹಿತಾಸಕ್ತಿಗಳು ನಿಜವಾದ ಬೆಳವಣಿಗೆಗೆ ಅಡ್ಡ ಬರುವವೋ, ಆ ವರ್ಗದ ತಾತ್ವಿಕತೆಯು ಸತ್ಯದಿಂದ ದೂರ ಉಳಿಯುವುದು; ಅಲ್ಲದೆ, ವಾಸ್ತವಿಕತೆಯನ್ನು ತನ್ನ ಹಿತಾಸಕ್ತಿಗಳಿಗನುಗುಣವಾಗಿ ಅಪಭ್ರಂಶ ಮಾಡಿಕೊಂಡು ಕ್ರಮೇಣ ಕ್ಷಯಿಸುವುದು.

ಉದಾಹರಣೆಗೆ, ಎಲ್ಲಿಯವರೆಗೆ ಬಂಡವಾಳಶಾಹಿಯು ಪಾಳೆಯಗಾರಿಕೆಯ ವಿರುದ್ಧ ಹೋರಾಡಿತೋ ಅಲ್ಲಿಯವರೆಗೆ ಅದರ ತಾತ್ವಿಕತೆಯು ಸತ್ಯಕ್ಕೆ ಸಮೀಪವಾಗಿದ್ದು ಜಗತ್ತನ್ನು ಪ್ರತಿಬಿಂಬಿಸಿತು. ಆದರೆ, ಯಾವಾಗ ಅದು ಅಧಿಕಾರಕ್ಕೆ ಬಂತೋ ಅಂದಿನಿಂದಲೇ ಅದು ತನ್ನ ಪ್ರಗತಿ ಶಕ್ತಿಗಳನ್ನು ಕಳೆದುಕೊಂಡು ಪ್ರಗತಿಗೇ ಅಡ್ಡಗೋಡೆಯಾಗಿ, ಅದರ ತಾತ್ವಿಕತೆಯು ಸತ್ಯವನ್ನು ಪ್ರತಿಬಿಂಬಿಸುವ ಶಕ್ತಿಯನ್ನು ಕಳೆದುಕೊಂಡಿತು ಮತ್ತು ಪ್ರತಿಗಾಮಿ ಶಕ್ತಿಯಾಗಿ ಪರಿವರ್ತನೆಗೊಂಡಿತು. ಮಾರ್ಕ್ಸ್‌ತನ್ನ 'ಕೆಪಿಟಲ್'(capital) ಗ್ರಂಥದಲ್ಲಿ ಹೇಳುವಂತೆ, "ನಿಷ್ಕಾಮ ಸತ್ಯಾನ್ವೇಷಕರ ಬದಲು ಬಹುಮಾನಕ್ಕೆ ಬಡಿದಾಡುವ ಬಾಡಿಗೆಗೆ ದೊರಕುವ ವಿಚಾರವಂತರು ಮುಂದೆ ಬಂದರು. ಸಹಜ ವೈಜ್ಞಾನಿಕ ಜಿಜ್ಞಾಸುಗಳ ಬದಲು, ಕೆಟ್ಟ ಬುದ್ಧಿಗಳೂ ದುಷ್ಟ ಅಭಿಲಾಷಿಗಳೂ ಮುಂದಾದರು". ಮಾರ್ಕ್ಸ್-ಲೆನಿನ್ ತತ್ವವು ಶ್ರಮಿಕ ವರ್ಗದ ಹಾಗೂ ಎಲ್ಲಾ ಜನರ ತತ್ವವಾಗಿದ್ದು, ವೈಜ್ಞಾನಿಕ ವಿಶ್ಲೇಷಣೆಯಿಂದ ಸತ್ಯತೆಯನ್ನು ಸ್ಪಷ್ಟವಾಗಿ ಎತ್ತಿ ಹಿಡಿಯುವುದು. ಕಾರಣ, ಶ್ರಮಿಕವರ್ಗದ ಹಿತಾಸಕ್ತಿಗಳೂ ಚರಿತ್ರೆಯ ವಾಸ್ತವಿಕ ಗತಿಯೂ ಯಾವಾಗಲೂ ಪರಸ್ಪರ ಹೊಂದಿಕೊಳ್ಳುವುವು. ಆದುದರಿಂದಲೇ, ಮಾರ್ಕ್ಸ್-ಲೆನಿನ್ ತತ್ವವು ಪ್ರಗತಿಯ ಎಲ್ಲಾ ಹಂತಗಳಲ್ಲೂ ಸತ್ಯವನ್ನೇ ಪ್ರತಿಬಿಂಬಿಸುವ ಶಕ್ತಿಯುಳ್ಳದ್ದಾಗಿದೆ.

ಸಾಮಾಜಿಕ ಪ್ರಜ್ಞೆಯು ಜನಜೀವನ, ಅವರ ಭೌತಿಕ ಮತ್ತು ಆರ್ಥಿಕ ಸಂಬಂಧಗಳ ಪ್ರತಿಬಿಂಬವಾದರೂ, ಸಮಾಜದ ಪ್ರಗತಿಯಲ್ಲಿ ತನ್ನದೇ ಆದ ಸ್ವಲ್ಪಮಟ್ಟಿನ ಸ್ವಾತಂತ್ರ್ಯವನ್ನು ಹೊಂದಿರುವುದು. ಅದು ಸಾಮಾಜಿಕ ಬೆಳವಣಿಗೆಯಿಂದ ಸ್ವಲ್ಪ ಹಿಂದಿರಲೂ ಬಹುದು, ಅಥವಾ ಸ್ವಲ್ಪ ಮುಂದಿರಲೂಬಹುದು.

ಸಾಮಾಜಿಕ ಪ್ರಜ್ಞೆಯು ಹಿಂದುಳಿಯಲು ಕಾರಣ ಸಮಾಜದಲ್ಲಿನ ವಸ್ತುಸ್ಥಿತಿಗಳು ಮೊದಲು ಬದಲಾವಣೆ ಹೊಂದಿ ಆಮೇಲೆ ಸಾಮಾಜಿಕ ಪ್ರಜ್ಞೆಯೂ ಬದಲಾವಣೆಹೊಂದಿ ಬೆಳೆಯಬೇಕಾಗಿದೆ. ಲೆನಿನ್ ಹೇಳಿರುವಂತೆ, ಒಂದು ಚುನಾವಣೆ ಅಥವಾ ಯುದ್ಧದಲ್ಲಿ ಗೆದ್ದು ರಾಜಕೀಯ ಅಧಿಕಾರವನ್ನು ಅನತಿಕಾಲದಲ್ಲಿಯೇ ಪಡೆದುಕೊಳ್ಳಬಹುದು. ಹಾಗೆಯೇ ಉತ್ಪಾದನಾ ಸಂಬಂಧವನ್ನು ಅದರ ಸಾಧನ ವಿಧಾನಗಳಿಗನುಗುಣವಾಗಿ ಅನತಿಕಾಲದಲ್ಲಿಯೇ ಮಾರ್ಪಡಿಸಬಹುದು. ಆದರೆ, ಹಿಂದಿನ ತಳಹದಿಯ ಮೇಲ್‌ರಚನೆಯಲ್ಲಿನ ಸಾಂಸ್ಕೃತಿಕ ತಾತ್ವಿಕ ಮೊದಲಾದ ಸಾಮಾಜಿಕ ಪ್ರಜ್ಞೆಯಲ್ಲಿ ಸೂಕ್ತ ಬದಲಾವಣೆಗಳನ್ನು ತರಲು ದೀರ್ಘಕಾಲದ ಪ್ರಯತ್ನ ಹೋರಾಟ ಬೇಕಾದೀತು. ಕಾರಣ, ಹಳೆಯ ಮೌಲ್ಯಗಳು, ವಿಚಾರಗಳು ವರ್ಗ ಹಿತಾಸಕ್ತಿಗಳಿಂದ ಕೂಡಿದ್ದು ವಾರ್ತಾ ಪತ್ರಿಕೆ, ಚಲನಚಿತ್ರ, ರೇಡಿಯೋ, ಟೆಲಿವಿಜನ್ ಮೊದಲಾದ ಪ್ರಚಾರ ಸಾಧನಗಳಿಂದ ಪ್ರಬಲವಾಗಿದ್ದು, ಕ್ಷಯಿಸಲು ಬಹಳ ಸಮಯ ಬೇಕಾಗುವುದು. ಆದುದರಿಂದಲೇ, ಸಾಮಾಜಿಕ ಕ್ರಾಂತಿಯಾದ ನಂತರವೂ, ಹಳೆಯ ವಿಚಾರಗಳು ತತ್ವಗಳು ಮೌಲ್ಯಗಳು ತಮ್ಮ ಪ್ರಭಾವವನ್ನು ಬೀರುತ್ತಲೇ ಇರುವುದರಿಂದ ಪುರೋಗಾಮಿ, ವೈಜ್ಞಾನಿಕ, ಸಾಂಸ್ಕೃತಿಕ ಕ್ರಾಂತಿಯೂ ಸಾಮಾಜಿಕ ಕ್ರಾಂತಿಯ ಯಶಸ್ಸನ್ನು ಕಾಪಾಡಿಕೊಳ್ಳಲು ಅತ್ಯಗತ್ಯವಾಗಿದೆ.

ಕೆಲವೊಮ್ಮೆ ಸಾಮಾಜಿಕ ಪ್ರಜ್ಞೆಯು ಸಾಮಾಜಿಕ ಬೆಳವಣಿಗೆಗಿಂತ ಬಹಳ ಮುಂದುವರಿದಿರಲೂಬಹುದು. ಸಮಾಜದ ಪ್ರತಿಭಾವಂತ ವಿಚಾರವಂತ ವ್ಯಕ್ತಿಗಳೂ ಸಂಘಸಂಸ್ಥೆಗಳೂ ಶತಮಾನಗಳಿಂದ ನಡೆದು ಬಂದ ಸಮಾಜದ ರೀತಿ ನಡತೆ, ಪ್ರಗತಿಯನ್ನು ವಿಶ್ಲೇಷಿಸಿ ವಿಮರ್ಶಿಸಿ ಹತ್ತಾರು ವರುಷಗಳ ಮುಂದೆ ಸಾಮಾಜಿಕ ಪ್ರಗತಿಯು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬ ಸಿದ್ಧಾಂತಗಳನ್ನೂ ಕಾರ್ಯಕ್ರಮಗಳನ್ನೂ ನಿರೂಪಿಸಿ ಪ್ರಗತಿಗೆ ಸ್ಫೂರ್ತಿಯನ್ನೂ ಚೇತನವನ್ನೂ ನೀಡಬಲ್ಲರು. ಈ ಮೊದಲೇ ತಿಳಿಸಿದಂತೆ ಸಾಮಾಜಿಕ ಪ್ರಗತಿಯು ನಿರಂತರವಾಗಿ ಸ್ವತಂತ್ರವಾಗಿ ಸಾಗುತ್ತಿರುವುದಾದರೂ, ಪ್ರಗತಿಯ ಸರ್ವತೋಮುಖವಾದ ನಿಯಮಗಳನ್ನೂ ಅದರ ಅಗತ್ಯತೆಯನ್ನೂ ಬುದ್ಧಿಪೂರ್ವಕವಾಗಿ ಪ್ರಜ್ಞೆಯ ದಿವ್ಯ ಶಕ್ತಿಯಿಂದ ಅರಿತುಕೊಂಡರೆ ಪ್ರಗತಿಯನ್ನು ಸಕ್ರಿಯವಾಗಿ ತ್ವರಿತಗೊಳಿಸಬಹುದು. ಇದೇ ಸಾಮಾಜಿಕ ಪ್ರಜ್ಞೆಯ ಮುಖ್ಯಪಾತ್ರ. ಯುಗಪುರುಷರ, ವಿಜ್ಞಾನಿಗಳ, ತತ್ವಜ್ಞಾನಿಗಳ, ಸಾಹಿತಿಗಳ ಕಲಾಗಾರರ, ಅಪೂರ್ವ ಕೊಡುಗೆ.

ತತ್ವಜ್ಞಾನದ ನಿರಂತರ ಅಭಿವೃದ್ಧಿಯೇ ಸಾಮಾಜಿಕ ಪ್ರಜ್ಞೆಯ ಸಾಕಷ್ಟು ಸ್ವಾತಂತ್ರ್ಯತೆಯನ್ನು ಸೂಚಿಸುವುದು. ಹೊಸಜನ, ಹೊಸವರ್ಗ ಶತಮಾನಗಳಿಂದ ತಲತಲಾಂತರಗಳಿಂದ ಗಳಿಸಿದ ಅತ್ಯಪೂರ್ವ ಸಾಧನೆಗಳನ್ನು ತನ್ನ ಪ್ರಗತಿಗೆ ಅಗತ್ಯವಾಗಿ ಕಂಡಲ್ಲಿ ಸ್ವೀಕರಿಸುವುದು, ವೃದ್ಧಿಸುವುದು, ರಕ್ಷಿಸುವುದು, ಬೇಡವಾದುದನ್ನು ಬಿಟ್ಟುಬಿಡುವುದು. ಆದುದರಿಂದಲೇ, ಶ್ರಮಿಕವರ್ಗವು ಮಾನವ ಇತಿಹಾಸದಲ್ಲಿನ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ವೈಜ್ಞಾನಿಕ, ಆಧ್ಯಾತ್ಮಿಕ ಸಾಧನೆ ಸಂಪತ್ತುಗಳನ್ನು ಕೂಲಂಕುಶವಾಗಿ ವಿಮರ್ಶಿಸಿ ಸ್ವೀಕರಿಸಿ ಬೆಳೆಸುವ ರಕ್ಷಿಸುವ ಮಹತ್ವದ ಹೊಣೆಹೊತ್ತಿದೆ.

**ಸಮಾಜ ಮತ್ತು ವ್ಯಕ್ತಿ:**

ಮುಂದಿನ ಪ್ರಶ್ನೆ ಸಮಾಜ ಮತ್ತು ವ್ಯಕ್ತಿ. ಶ್ರಮಶಕ್ತಿಯೇ ಮಾನವನ, ಸಮಾಜದ ಬೆಳವಣಿಗೆಗೆ ಕಾರಣವೆಂದ ಮೇಲೆ ಜನತೆ, ಸಮಾಜವೆಂದರೆ ಪ್ರಗತಿಯ ದೃಷ್ಟಿಯಿಂದ ಶ್ರಮಿಕವರ್ಗ, ಅತ್ಯಧಿಕ ಸಂಖ್ಯೆಯಲ್ಲಿರುವ ಜನಸಮುದಾಯ, ರೈತರು, ಕಾರ್ಮಿಕರು, ಬುದ್ಧಿಜೀವಿಗಳು, ಉತ್ಪಾದನೆಯ ವಿಧಾನವೇ ಜನಜೀವನದ ಮೂಲಾಧಾರ. ಭೌತಿಕ ಮತ್ತು ಬೌದ್ಧಿಕ ಸಂಪತ್ತುಗಳುಅವರದೇ ಸೃಷ್ಟಿ. ಮಾನವ ಚರಿತ್ರೆಯೂ ಅವರದೇ. ಅವರ ಬಾಳುಬೆಳಗಿದಂತೆಲ್ಲಾ ಇತಿಹಾಸದಲ್ಲಿ ಅವರಿಗೆ ಹೆಚ್ಚು ಹೆಚ್ಚು ಮಹತ್ವದ ಪಾತ್ರ. ಉತ್ಪಾದನೆಯ ಸಾಧನ ವಿಧಾನಗಳಲ್ಲಿ ಪ್ರಗತಿಯನ್ನು ಸಾಧಿಸುತ್ತಿರುವ, ಅದಕ್ಕನುಗುಣವಾಗಿ ಸಮಾಜದಲ್ಲಿ ಸಾಮೂಹಿಕ ಸಂಬಂಧವನ್ನು ರೂಪಿಸಿಕೊಳ್ಳುವ, ಸಮಾಜದ ಪ್ರಗತಿಯ ಪ್ರತಿಕ್ರಾಂತಿಯಲ್ಲಿಯೂ ಅವರದೇ ಹೆಚ್ಚು ಹೆಚ್ಚು ಪಾತ್ರ.

ಆದರೆ, ಮಾರ್ಕ್ಸ್‌ವಾದವು ಚರಿತ್ರೆಯಲ್ಲಿ ವ್ಯಕ್ತಿಯ ಪಾತ್ರವನ್ನು ಅಲ್ಲಗಳೆಯುವುದಿಲ್ಲ; ವ್ಯಕ್ತಿಯ ಪಾತ್ರ ಮಹತ್ವದ್ದಲ್ಲವೆಂದು ಕಡೆಗಣಿಸುವುದಿಲ್ಲ. ಲೆನಿನ್ ಹೇಳುವಂತೆ, "ವ್ಯಕ್ತಿಯ ಪಾತ್ರ ಇತಿಹಾಸದ ಅಗತ್ಯತೆಗನುಗುಣವಾಗಿದ್ದರೂ, ಅವನ ಪಾತ್ರವನ್ನು ಅಲ್ಲಗಳೆಯಲಾಗದು; ಅಲ್ಲದೆ, ಚರಿತ್ರೆಯು ವ್ಯಕ್ತಿಗಳ ಕರ್ತೃತ್ವ ಶಕ್ತಿಗಳಿಂದಲೇ ರೂಪಿತವಾದ ಕಾರಣ ಅವರ ಪಾತ್ರ ಮಹತ್ವವಾದದ್ದೇ". ಸಮಾಜದ ಪ್ರಗತಿಯತ್ತ ಹೋರಾಟದಲ್ಲಿ ಜನರು ತಮ್ಮ ಪಕ್ಷವನ್ನು, ಧುರೀಣರನ್ನು, ತತ್ವಜ್ಞಾನಿಗಳನ್ನು ಆರಿಸಿಕೊಳ್ಳುತ್ತಾರೆ. ಜನರು ಹೆಚ್ಚು ಹೆಚ್ಚು ಜಾಗೃತರಾಗಿ ಚುರುಕಾದಂತೆಲ್ಲಾ ಹೆಚ್ಚು ಹೆಚ್ಚು ಧೀರ, ಸಶಕ್ತ, ಮೇಧಾವಿ ಧುರೀಣರನ್ನು ಕಂಡುಕೊಳ್ಳುತ್ತಾರೆ. ಅಂತಹ ವ್ಯಕ್ತಿಶ್ರೇಷ್ಠರು ಸಾಮಾಜಿಕ ಪ್ರಜ್ಞೆಯ ಸಂಪೂರ್ಣ ಪರಿಚಯ ಪಡೆದು ಜನರನ್ನು ಅವರ ಪ್ರಗತಿಯ ಅಗತ್ಯತೆಯ ಹೋರಾಟಕ್ಕೆ ಹುರಿದುಂಬಿಸಿ ಸಿದ್ಧಮಾಡುವರು.

ಯುಗಪುರುಷರೂ, ರಾಜಕಾರಣಿಗಳೂ, ವಿಜ್ಞಾನಿಗಳೂ, ಸಾಹಿತಿಗಳೂ ಆಯಾಯ ಕಾಲದ ಅಗತ್ಯತೆಗನುಗುಣವಾಗಿ ಜನರ ಮುಂದೆ ವ್ಯಕ್ತವಾಗುವರೇ ಹೊರತು, ಅನಿರೀಕ್ಷಿತವಾಗಿಯಲ್ಲ. ಇತಿಹಾಸದಲ್ಲಿ, ಕ್ರಾಂತಿಕಾಲಗಳಲ್ಲಿ ಅತ್ಯುತ್ತಮ ಧುರೀಣರು ನಾನಾ ಕ್ಷೇತ್ರಗಳಲ್ಲಿ ಮುಂಬರಲು ಆಯಾಯ ಕಾಲದ ಜನಜೀವನವೇ ಕಾರಣ. ಜನರೇ ಅವರ ಸ್ಫೂರ್ತಿ. ಅವರ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ನಿಸ್ವಾರ್ಥತೆಯಿಂದ ತನ್ನ ಸರ್ವಶಕ್ತಿಯನ್ನು ಯಾರು ವಿನಿಯೋಗಿಸುತ್ತಾನೋ, ಅವನೇ ಆಕಾಲದ, ಆ ಜನರ ಶ್ರೇಷ್ಠ ನಾಯಕನಾಗುತ್ತಾನೆ. ಮಾರ್ಕ್ಸ್, ಏಂಗಲ್ಸ್, ಲೆನಿನ್ ಮುಂತಾದವರು ಅಂತಹ ಶ್ರೇಷ್ಠ ಧುರೀಣರಾಗಿದ್ದರೂ, ವ್ಯಕ್ತಿಪೂಜೆ ಸಲ್ಲದೆಂದೂ, ಸಮಾಜದ ಮುಂದೆ ವ್ಯಕ್ತಿ ಗೌಣವೆಂದೂ, ವ್ಯಕ್ತಿಯ ಅಪ್ಪೊಂದ-

ವಿಕಾಸಕ್ಕೆ ಸಮಾಜದ ವಿಕಾಸವೇ ಜನಜೀವನವೇ ಕಾರಣವೆಂದೂ, ವ್ಯಕ್ತಿಗೆ ಹೆಚ್ಚಿನ ಮಹತ್ವಕೊಟ್ಟಲ್ಲಿ ಅವನು ಜೀವನದಿಂದ ಪ್ರಕೃತಿಯಿಂದ ಕಂಡುಕೊಳ್ಳಬೇಕಾದ ಸತ್ಯವು ಕುಂಠಿತವಾಗುವುದೆಂದೂ, ಈ ಯುಗಪುರುಷರೇ ಸಾರಿದರು. ಹೀಗೆಂದು ವ್ಯಕ್ತಿ ಸ್ವಾತಂತ್ರ್ಯವನ್ನೇನೂ ಅಲ್ಲಗಳೆದಂತಾಗಲಿಲ್ಲ. ಜನಹಿತಕ್ಕಾಗಿ, ಜನಾನುಭವದಿಂದ ಮಾರ್ಗದರ್ಶನ ಪಡೆದು ವ್ಯಕ್ತಿಯು ಸಮಾಜದ ಯಾವ ಕ್ಷೇತ್ರದಲ್ಲಿಯೂ ಮುಂದುವರಿಯಬಹುದು. ಅವನನ್ನಾರೂ ತಡೆಯಲಾರರು.

ಆದರೆ, ವರ್ಗ ವೈಷಮ್ಯದಿಂದ ಇಬ್ಭಾಗವಾಗಿರುವ ಸಮಾಜದಲ್ಲಿ, ಅಲ್ಪಸಂಖ್ಯಾತವಾಗಿರುವ ಆಳುವ ಶೋಷಕವರ್ಗ, ದಾಸ್ಯಸಮಾಜ ಪದ್ಧತಿಯಿಂದ ಇದುತನಕ, ಬಹುಸಂಖ್ಯಾತವಾಗಿರುವ ಶ್ರಮಿಕವರ್ಗವನ್ನು ಶೋಷಿಸಿದ, ಅವರನ್ನು ಪಾದಾಕ್ರಾಂತ ಮಾಡಿದ, ಅವರ ಪರವಾಗಿ ಪ್ರಗತಿಗಾಗಿ ಶ್ರಮಿಸಿದ ವಿಜ್ಞಾನಿಗಳ ಸಾಹಿತಿಗಳ ತತ್ವಜ್ಞಾನಿಗಳ ಮತ್ತಿತರ ಧುರೀಣರನ್ನು ಕೊಲೆಹಿಂಸೆಗಳಿಗೆ ಗುರಿಮಾಡಿದ ಹೇಯ ಹಾಗೂ ಭಯಾನಕ ಚಾರಿತ್ರಿಕ ದಾಖಲೆಯು, ಸಮಾಜವಾದಿ ರಾಷ್ಟ್ರಗಳಲ್ಲಿ ಇಂದು ಇಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ವರ್ಗ ಹೋರಾಟವು ಸಮಾಜದಲ್ಲಿನ ಮೂಲಭೂತವಾದ ಆರ್ಥಿಕ ವ್ಯವಸ್ಥೆಯು ಶ್ರಮಿಕ ವರ್ಗದ ಹಿತಾಸಕ್ತಿಗಳಿಗನುಗುಣವಾಗಿ ಸಾಮೂಹಿಕವಾಗಿರಬೇಕೆಂದಿರುವುದರಿಂದ, ಒಮ್ಮೆ ಬಹುಸಂಖ್ಯಾತವಾಗಿರುವ ಶ್ರಮಿಕವರ್ಗವು ತನ್ನ ಅಲ್ಪಸಂಖ್ಯಾತವಾಗಿರುವ ಪ್ರತಿಸ್ಪರ್ಧಿ ವರ್ಗವನ್ನು ರಾಜಕೀಯ ಮತ್ತು ಆರ್ಥಿಕ ಅಧಿಕಾರಗಳಿಂದ ಪದಚ್ಯುತರನ್ನಾಗಿ ಮಾಡಿದ ಮೇಲೆ, ಸಾಂಸ್ಕೃತಿಕ ಕ್ರಾಂತಿಯು ಅಲ್ಪಸಂಖ್ಯಾತ ಪ್ರತಿಸ್ಪರ್ಧಿಗಳಿಗೆ ಬಹುಸಂಖ್ಯಾತ ಶ್ರಮಿಕ ವರ್ಗದವರಿಗಿದ್ದಷ್ಟೇ ಸಮಾನ ಸ್ವಾತಂತ್ರ್ಯಕೊಟ್ಟು ಸಾಧಿಸುವ ಭರವಸೆಯನ್ನು ಹೊಂದಿದೆ.

ಅಲ್ಪಸಂಖ್ಯಾತ ಆಳುವ ಶೋಷಕ ವರ್ಗವು ಸಮಾಜದ ಉತ್ಪಾದನಾ ಸಾಧನ ವಿಧಾನಗಳ ಸ್ವಾಮ್ಯತೆಯನ್ನು ಹೊಂದಿರುವಾಗ ತನ್ನ ಪ್ರತಿಸ್ಪರ್ಧಿ ಬಹುಸಂಖ್ಯಾತ ಶ್ರಮಿಕವರ್ಗಕ್ಕೆ ತೋರಿಕೆಯ ನಾಗರಿಕ ಸ್ವಾತಂತ್ರ್ಯವನ್ನು ಕರುಣಿಸಿ, ಪ್ರತಿಸ್ಪರ್ಧಿವರ್ಗವು ಅದನ್ನು ತನ್ನ ಪ್ರಗತಿಗೆ-ಮುಕ್ತಿಗೆ ಬಳಸಿಕೊಂಡು, ಅಲ್ಪಸಂಖ್ಯಾತವರ್ಗವನ್ನು ಆರ್ಥಿಕ ಮತ್ತು ರಾಜಕೀಯ ಸ್ಥಾನಗಳಿಂದ ಪದಚ್ಯುತಗೊಳಿಸುವ ಹೋರಾಟದ ಪ್ರತಿಯೊಂದು ಹಂತದಲ್ಲಿಯೂ ತನ್ನ ರಾಜಕೀಯ, ಮಿಲಿಟರಿ, ಕಾನೂನು, ನ್ಯಾಯ ಮೊದಲಾದ ರಚನೆಗಳಿಂದ ತೀವ್ರ ದಂಡನೆಯನ್ನು ವಿಧಿಸುವುದು ಹಾಗೂ ನಾಗರಿಕ ಹಕ್ಕುಗಳನ್ನೂ ಹತ್ತಿಕ್ಕುವುದು. ಅದೇ ರೀತಿ, ಸಮಾಜವಾದಿ ಸಮಾಜದಲ್ಲಿ ಬಹುಸಂಖ್ಯಾತ ಶ್ರಮಿಕವರ್ಗದ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಿ ಕಬಳಿಸಲು ತೊಡಗುವ ಅಲ್ಪಸಂಖ್ಯಾತ ಪ್ರತಿಸ್ಪರ್ಧಿಗಳ ವ್ಯಕ್ತಿಸ್ವಾತಂತ್ರ್ಯದಲ್ಲಿ ಬಹುಸಂಖ್ಯಾತರ ಹಿತದೃಷ್ಟಿಯಿಂದ ಸ್ವಲ್ಪ ಹತೋಟಿಯನ್ನಿಟ್ಟರೆ ತಪ್ಪೇನು? ಯಾವುದೇ ಸಮಾಜ ಪದ್ಧತಿಯ ವ್ಯಕ್ತಿಸ್ವಾತಂತ್ರ್ಯವನ್ನು ಈ ದೃಷ್ಟಿಯಿಂದ ವಿವೇಚಿಸಿದರೆ ಅನವಶ್ಯಕ ಬೊಬ್ಬೆಯು ಕಡಿಮೆಯಾದೀತು.

**ಕಲೆ ಮತ್ತು ಸಾಹಿತ್ಯ :**

ಕಲೆ, ಸಾಹಿತ್ಯ ಭಾವನಾತ್ಮಕ (emotional) ಮತ್ತು ವಿಜ್ಞಾನ, ತಂತ್ರಜ್ಞಾನ ವಿಚಾರಾತ್ಮಕ (intellectual) ಇವೆರಡೂ ಪರಸ್ಪರ ವಿರುದ್ಧವಾದವುಗಳಲ್ಲ. ಒಂದೇ ತಳಪಾಯದಿಂದ ಹುಟ್ಟಿದ ಪ್ರಜ್ಞೆಯ ಎರಡು ಮುಖಗಳು. ಇವೆರಡೂ ಮಾನವನ, ಸಮಾಜದ ಆರ್ಥಿಕ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗಳಿಗೆ ನೆರವಾಗುವುವು. ಪ್ರಕೃತಿಯ, ಸಮಾಜದ ಅನಂತವೂ ವೈವಿಧ್ಯವೂ ಆಗಿರುವ ಘಟನೆಗಳನ್ನು ಚಿತ್ರವಿಚಿತ್ರವಾಗಿ ಭಾವನಾತ್ಮಕವಾಗಿ ಪ್ರತಿಬಿಂಬಿಸುವ ಮಾನವ ಪ್ರಜ್ಞೆಯ ಪ್ರಾಕಾರಗಳು, ಕತೆ, ಕಾವ್ಯ, ನಾಟಕ, ಸಂಗೀತ, ಸಿನೇಮಾ, ಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆ ಇವೇ ಮೊದಲಾದವುಗಳಲ್ಲಿ ಅಭಿವ್ಯಕ್ತವಾಗಿವೆ. ವಿಜ್ಞಾನವು ಪರಿಸರವನ್ನು ನಿರ್ದಿಷ್ಟ ಸಂಕೇತ, ಮಾತ್ರ (concepts, laws)ಗಳಿಂದ ಪ್ರತಿಬಿಂಬಿಸುವುದಾದರೆ, ಕಲೆಯು ಪಂಚೇಂದ್ರಿಯಗಳಿಂದ ಅನುಭವಿಸಬಹುದಾದ ನಿರ್ದಿಷ್ಟ ರೂಪಕ (forms, images)ಗಳಿಂದ ವಾಸ್ತವಿಕತೆಯ ಮುಖ್ಯಾಂಶಗಳನ್ನು ಕಾಲ್ಪನಿಕ ವ್ಯಕ್ತಿಗಳ, ಸ್ವರಗಳ, ಚಿತ್ರಗಳ ಮೂಲಕ ಪ್ರಚುರಪಡಿಸುತ್ತದೆ. ವಿಜ್ಞಾನ ಮತ್ತು ಕಲೆಯು ಸತ್ಯ ಮತ್ತು ಸೌಂದರ್ಯವನ್ನು ಪ್ರತಿನಿಧಿಸುತ್ತವೆ. ಶ್ರಮಶಕ್ತಿಯು, ಸಾಮೂಹಿಕ ಜೀವನದ ಬೆಳವಣಿಗೆಯೇ ಕಲೆ, ಸಾಹಿತ್ಯಗಳಿಗೂ ಆಧಾರ, ಸ್ಫೂರ್ತಿ.

ವರ್ಗ ವಿಚ್ಛಿನ್ನವಾದ ಸಮಾಜದಲ್ಲಿ ಕಲೆ, ಸಾಹಿತ್ಯವು ಆಯಾಯ ವರ್ಗ ಹಿತಾಸಕ್ತಿಗಳಿಂದಲೇ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕೂಡಿರುವುವು. ಆದುದರಿಂದ 'ಕಲೆಗಾಗಿ ಕಲೆ' ಎಂಬ ವಾದ ಇಂತಹ ಸಮಾಜದಲ್ಲಿ ಹುರುಳಿಲ್ಲದ್ದು. ಬದಲು, ಕಲೆ ಸಾಹಿತ್ಯಗಳು ಆಯಾಯ ವರ್ಗದ ರಾಜಕೀಯ, ನೈತಿಕ, ಶೈಕ್ಷಣಿಕ ತಿಳುವಳಿಕೆಗಳಿಗೆ ಅತ್ಯಂತ ಪ್ರಭಾವಶಾಲಿ ಮಾಧ್ಯಮವಾಗಿದೆ. ಆಕಾರಣದಿಂದಲೇ, ವರ್ಗ ಹೋರಾಟವು ಆರ್ಥಿಕ, ರಾಜಕೀಯ ಕ್ಷೇತ್ರಗಳಿಗೇ ಸೀಮಿತವಾಗಿರದೆ ಕಲೆ, ಸಾಹಿತ್ಯ ಕ್ಷೇತ್ರಗಳನ್ನೂ ಆವರಿಸುವುವು. ಮಾವೋ ಹೇಳುವಂತೆ, "ಇವು ಪ್ರಜ್ಞೆಯ ಎರಡು ಮುಖಗಳು; ಒಂದೇ ಗುರಿಯತ್ತ ಸಾಗುವ ಹೋರಾಟದ ಎರಡು ರಂಗಗಳು".

ಕಲೆ, ಸಾಹಿತ್ಯಗಳ ನಾನಾ ಪ್ರಕಾರಗಳು ಆಯಾಯ ಕಾಲದ ವ್ಯಕ್ತಿಗಳ ಸೃಷ್ಟ್ಯಾತ್ಮಕ ಕೃತಿಗಳೆನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ, ಅಂತಹ ವ್ಯಕ್ತಿಗಳು ಎಷ್ಟೇ ಶ್ರೇಷ್ಠರಾದರೂ ಅವರು ಸಮಾಜದ ಸದಸ್ಯರಾಗಿದ್ದು, ಅದರ ಪರಿಸರದಿಂದಲೇ ಪ್ರಭಾವಿತರಾಗಿದ್ದವರೆಂದು ಮರೆಯಬಾರದು. ಅವರ ಪ್ರಜ್ಞೆ, ಸಮಾಜಿಕ ಪ್ರಜ್ಞೆಯ ಒಂದಂಶ. ಯಾರು ತನ್ನ ಕಾಲದ ಸಮಾಜಿಕ ಪ್ರಜ್ಞೆಯನ್ನು ಅದರ ಮುಂದಿನ ಬೆಳವಣಿಗೆಗಾಗಿ ವಿಜ್ಞಾನಿಯ ಕಲೆಯ ಮಾಧ್ಯಮದಿಂದ ಎಷ್ಟೆಷ್ಟು ವಿಶಾಲವಾಗಿ ಸ್ಪಷ್ಟವಾಗಿ ವ್ಯಕ್ತಪಡಿಸಬಲ್ಲನೋ, ಅವನೇ ಆಕಾಲದ ಶ್ರೇಷ್ಠ ಕಲೆಗಾರ, ಸಾಹಿತಿ, ವಿಜ್ಞಾನಿ, ತತ್ವಜ್ಞಾನಿ, ರಾಜಕಾರಿಣಿಯಾಗಬಲ್ಲ. ಯಾರ ಕೃತಿಗಳು ಸಮಾಜ ಜೀವನದ ಆಚಾರ ವಿಚಾರಗಳಿಗೆ ಅತ್ಯಂತ ನಿಕಟವಾಗಿರುವುವೋ ಅವುಗಳೇ ಶ್ರೇಷ್ಠ ಕೃತಿಗಳೆಂದು ಜನರಿಂದ ಸ್ವೀಕೃತವಾಗುವುವು. ಅವುಗಳೇ ಜನಶಕ್ತಿಯ ಮಾಧ್ಯಮವಾಗುವುವು.

ಸಮಾಜದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ಶ್ರಮಿಕವರ್ಗ, ಪರಂಪರೆಯಿಂದ ಬೆಳೆದು ಬಂದ ಕಲೆ, ಸಾಹಿತ್ಯಗಳ ಸೌಂದರ್ಯವನ್ನೂ, ಪ್ರೇಮ, ಪ್ರೀತಿ, ದಯೆ, ಕರುಣೆ, ಸಹಕಾರ, ಧೈರ್ಯ, ಸಾಹಸ, ಸಹಜೀವನ ಮುಂತಾದ ಮಾನವ ಗುಣವಿಶೇಷಗಳನ್ನೂ ತನ್ನದಾಗಿರಿಸಿಕೊಂಡು, ಅಸತ್ಯವನ್ನು, ಅಪ್ರಯೋಜಕವಾದವುಗಳನ್ನು ಬಿಟ್ಟುಬಿಡುವುದು. ಆದುದರಿಂದಲೇ, ಗ್ರೀಕರ ಶಿಲ್ಪಕಲೆಗಳೂ, ರಿನೆಸಾನ್ಸ್ (renaissance)ನ ಚಿತ್ರಕಲೆಗಳೂ, ಶೇಕ್ಸ್‌ಪಿಯರ್, ವ್ಯಾಸ, ವಾಲ್ಮೀಕಿ ಗೋಯತೆ ಬಲಝಾಕ್, ಪುಷ್ಕಿನ್, ಟಾಲ್‌ಸ್ಟಾಯ್, ಠಾಗೂರ್, ರೋಮಿಯನ್ ರೋಲಾಂಡ್, ಮ್ಯಾಕ್ಸಿಂಗಾರ್ಕಿ ಮುಂತಾದವರ ಕೃತಿಗಳು ಇಂದೂ ಜನಾದರಣೀಯವಾಗಿವೆ ಹಾಗೂ ಕಾಲಾತೀತವಾಗಿವೆ.

ವಿಶ್ವವೈಶಾಲ್ಯ ದೃಷ್ಟಿಯುಳ್ಳ ಮಾರ್ಕ್ಸ್‌ವಾದವು ಪ್ರಕೃತಿ-ಪ್ರಜ್ಞೆಯ ಕಾರ್ಯಕಾರಣ ಸಂಬಂಧವನ್ನು ನಿರ್ದಿಷ್ಟಪಡಿಸಿ, ಸಮಾಜ-ವ್ಯಕ್ತಿ, ತಳಪಾಯ-ಮೇಲ್‌ರಚನೆ, ಸಮಾಜಪ್ರಜ್ಞೆ-ಸತ್ಯ, ವಿಚಾರಾತ್ಮಕ-ಭಾವನಾತ್ಮಕ ಪ್ರಜ್ಞೆ ಇವೆಲ್ಲವುಗಳ ಸ್ಥಾನಮಾನಗಳನ್ನು ಮಾನವ ಕುಟುಂಬದ ನಿರಂತರ ಪ್ರಗತಿಯ ಇತಿಹಾಸದಲ್ಲಿ ತೋರಿಸಿಕೊಟ್ಟು, ಶ್ರಮಿಕವರ್ಗದ ಶ್ರೇಷ್ಠ ಮಾರ್ಗದರ್ಶಿಯಾಗಿದೆ. ಈ ತತ್ವವನ್ನು ಪುನರ್‌ವಿಮರ್ಶಿಸಿದಷ್ಟೂ, ಕ್ರಿಯಾತ್ಮಕವಾಗಿ ಅನುಷ್ಠಾನಕ್ಕೆ ತಂದುಕೊಂಡಷ್ಟೂ ಇದು ಹೆಚ್ಚುಹೆಚ್ಚು ಶ್ರೀಮಂತವಾಗುವುದು.

ಗ್ರಂಥಋಣ :


J. Stalin: Dialectical and Historical Materialism, National Book Agency Private Ltd., Calcutta.

V. Atanaszev: Marxist Philosophy, A popular outline, Progress Publishers, Moscow.

E.M.S. Namboodaripad: On culture, literature as superstructure.

M. S. Devdas: Communist writers (Both these papers were submitted for discussion at the second conferencc of Indian school of social sciences, Trivandrum held at Madras in December 1971)


○

# ಮಂಜೇಶ್ವರ ಪಂಚಾಯತ್ – ಕೇರಳ ಸೋಪಲಿಸ್ಟ್ ಯೂತ್ ಫೆಡರೇಷನ್ ಸಭೆ

ಕೇರಳ ಸೋಷಲಿಸ್ಟ್ ಯುವಜನ ಫೆಡರೇಷನ್ನಿನ ಮಂಜೇಶ್ವರ ಪಂಚಾಯತು ಸಭೆಯೊಂದು ಇದೇ ತಾ. 9-12-79ನೇ ಭಾನುವಾರ ಬೆಳಿಗ್ಗೆ ಬಂಗ್ರಮಂಜೇಶ್ವರದ ತಮ್ಮ ಕಛೇರಿಯಲ್ಲಿ ಕಾಂ. ಬಾಬುಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಸಭೆಯಲ್ಲಿ ಮಾತನಾಡಿದ ಕೆ. ಎಸ್. ವೈ. ಎಫ್, ಮಂಜೇಶ್ವರ ಬ್ಲೋಕ್ ಸಮಿತಿಯ ಕಾರ್ಯದರ್ಶಿಗಳಾದ ಕಾಂ. ಯು. ವಸಂತನವರು, ದಿನದಿಂದ ದಿನಕ್ಕೆ ಬದಲಾಗುತ್ತಿರುವ ರಾಜಕೀಯ ರಂಗದಲ್ಲಿ ಯುವಜನರ ಪಾತ್ರವೇನು? ಎಂದು ವಿವರಿಸಿದರು. ಮಾತ್ರವಲ್ಲದೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಎಡ ಪ್ರಜಾಪ್ರಭುತ್ವ ರಂಗದ ಉಮೇದ್ವಾರ ಕಾಂ. ರಾಮಣ್ಣರೈಯವರನ್ನು ಗೆಲ್ಲಿಸಲಿಕ್ಕಾಗಿ ಶಕ್ತಿ ಮೀರಿ ಪ್ರಯತ್ನಿಸುವುದರೊಂದಿಗೆ ರಾಜ್ಯದಲ್ಲಿ ತಲೆದೋರಿರುವ ಅಸಮತ್ವಗಳಿಗೆ ಮೂಲ ಕಾರಣರಾಗಿರುವ ಸರ್ವಾಧಿಕಾರೀ ಶಕ್ತಿಗಳಿಗೂ, ಜಾತೀಯವಾದಿ ಶಕ್ತಿಗಳಿಗೂ, ಎಂದೆಂದಿಗೂ ತಲೆಎತ್ತದಂದೆ ಪ್ರಯತ್ನಿಸುವಲ್ಲಿ ಯುವಜನರು ಮುಖ್ಯಪಾತ್ರವನ್ನು ವಹಿಸಬೇಕೆಂದರು.

ಸಭೆಯಲ್ಲಿ ಮಾತನಾಡಿದ ಕಾಂ. ಬಿ. ಯಂ. ಮೂದವನವರು ಇಂದಿನ ರಾಜಕೀಯದಲ್ಲಿ ಸರ್ವಾಧಿಕಾರೀ ಶಕ್ತಿಯೂದ ಇಂದಿರಾ ಕಾಂಗ್ರೆಸು "ಸುಭದ್ರ ಹಾಗೂ ಶಾಂತಿಯುತವಾದ ಸರಕಾರ" ತಮ್ಮಿಂದ ಮಾತ್ರ ಎಂದು ಸಾರುತ್ತಾ ಇದ್ದರೂ ಸ್ವಾತಂತ್ರ್ಯಾನಂತರದ ಇತಿಹಾಸದ ಪುಟಗಳನ್ನು ಪರಿಶೋಧಿಸಿದಲ್ಲಿ ನಮಗೆ ತಿಳಿಯಬಹುದೇನೆಂದರೆ ಒಂದು ಬಂಡವಾಳ ವರ್ಗದ ಪಕ್ಷವಾದ ಕಾಂಗ್ರೆಸ್ಸು ಎಂದೂ ಒಂದು ಭದ್ರಸರಕಾರವನ್ನು ನಡೆಸಲಿಲ್ಲ. ಜವಾಹರ ಲಾಲ್ ನೆಹರೂ ಹಾಗೂ ಸರ್ದಾರ್ ಪಟೇಲ್ ಹಾಗೂ ರಾಜೇಂದ್ರ ಪ್ರಸಾದರಿಗೂ ಪರಸ್ಪರ ಕಚ್ಚಾಟವಿತ್ತು. ಆಂಧ್ರ, ಉತ್ತರಪ್ರದೇಶ, ಬಿಹಾರ ಮುಂತಾದ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರ ನೆಹರೂರವರ ಕಾಲದಲ್ಲಿಯೇ ಅಧಿಕಾರ ಕಳಕೊಂಡಿತ್ತು. ಅದು ಕಾಂಗ್ರೆಸಿನದರೊಳಗಿರುವ ಬಿನ್ನತೆಯೇ ಕಾರಣವಾಗಿತ್ತು. ಕಾಂಗ್ರೆಸ್ಸೇತರ ಸರಕಾರ ಎಲ್ಲಿಯಾದರು ಬಂದರೆ ಅದನ್ನ ಪೂರ್ಣ ಕಾಲಾವಧಿವರೆಗೆ ಮುಂದುವರಿಸಲು ಬಿಡದೆ ಅಂತಹ ಸರಕಾರವನ್ನೇ ಉರುಳಿಸಲು ಪ್ರಯತ್ನಿಸಿತ್ತು. ಕಡೆಗೆ ಅಧಿಕಾರ ನಷ್ಟವಾಗುತ್ತದೆಂದು ಅರಿವಾದಾಗ ಎಲ್ಲಾ ಘಟನೆಗಳನ್ನೂ, ಪ್ರಜಾಪ್ರಭುತ್ವದ ಅಡಿಪಾಯವನ್ನೂ ಕಿತ್ತೊಗೆದು ಒಂದು ಕರಾಳವಾದ ವಿಷಮ ಪರಿಸ್ಥಿತಿಯನ್ನೇ ಸೃಷ್ಟಿಸಲಾಯಿತು. ಆರ್. ಎಸ್. ಎಸ್‌ನ ವಿಷಜ್ವಾಲೆಗಳಿಗೆ-ಅಲೀಘರ್, ಜಂಶೆಡ್‌ಪುರ ಮುಂತಾದಕಡೆಗಳಲ್ಲಿ ಜನಸಾಮಾನ್ಯರೂ ವಿರೋಧ ಪಕ್ಷದವರೂ ಆಹುತಿಯಾದರು. ಇಂತಹ ಜಾತೀಯವಾದಿಗಳನ್ನು ಈ ಮಣ್ಣಿನಿಂದ ಹೊಡೆದೋಡಿಸಬೇಕಾಗಿದೆ.

ಅದಕ್ಕಾಗಿ ಮುಂಬರುವ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಯನ್ನು ವಿಜಯೀಗೊಳಿಸಿ ಶ್ರಮಜೀವೀ ವರ್ಗದ ಐಕ್ಯಶಕ್ತಿಯನ್ನು ಎತ್ತಿ ಹಿಡಿಯುವುದರಲ್ಲಿ ಯುವಜನ ಫೆಡರೇಷನ್ನಿನ ಕಾರ್ಯಕರ್ತರು ಮುಂದಾಗಬೇಕೆಂದು ಕರೆಯಿತ್ತರು.

ಕೊನೆಗೆ ಕಾಂ. ಲಕ್ಷ್ಮಣನವರು ಕಾರ್ಯದರ್ಶಿ ಹಾಗೂ ಕಾಂ. ಸದಾಶಿವ ಅಧ್ಯಕ್ಷರಾಗಿರುವ 15 ಸದಸ್ಯರ ಪಂಚಾಯತು ಕಮಿಟಿಯನ್ನು ಆಯ್ಕೆ ಮಾಡಲಾಯಿತು,

●

## ಚಂದಾ ವಿವರ

| | |
|---|---|
| ಬಿಡಿಪ್ರತಿ | 40 ಪೈಸೆ |
| 6 ತಿಂಗಳಿಗೆ | 10 ರೂ. |
| ಒಂದು ವರ್ಷಕ್ಕೆ | 20 ರೂ. |

# ಅರಣ್ಯ ನೌಕರರ ಅರಣ್ಯ ರೋದನ

ಸರ್ಕಾರದ ಮಹತ್ವದ ಆದಾಯ ಮೂಲಗಳಲ್ಲಿ ಅರಣ್ಯವೂ ಒಂದು. ಉ.ಕ. ಜಿಲ್ಲೆಯಲ್ಲಿರುವ ಅರಣ್ಯಗಳಿಂದಲೇ ಸರ್ಕಾರಕ್ಕೆ ಮೂರು ಕೋಟಿರೂಪಾಯಿಗಳಷ್ಟು ಆದಾಯವಿದೆ. ಆದರೆ ಅರಣ್ಯ ನೌಕರರ ಗೋಳನ್ನು ಸರ್ಕಾರ ಕೇಳುವುದಕ್ಕೆ ಸಿದ್ಧವಿಲ್ಲ. ನಾಗರಹೊಳೆಯಂತಹ ಗೊಂಡಾರಣ್ಯಗಳನ್ನು ಅಭಯಾರಣ್ಯವೆಂದು ಸಾರಿರುವುದರಿಂದ, ಇಲ್ಲಿ ತಿರುಗಾಡುವ ನೌಕರರು ಕಳ್ಳಕಾಕರು, ಕ್ರೂರ ಮೃಗಗಳಿಂದ ರಕ್ಷಿಸಿಕೊಳ್ಳಲು ಆತ್ಮರಕ್ಷಣಾ ಸಾಧನವಾಗಿ ಕೋವಿಯನ್ನು ಕೊಡಿ ಎಂದರೆ, ಇಲ್ಲ. ಜನವಸತಿಯಿಲ್ಲದ ಅರಣ್ಯಗಳ ಮಧ್ಯೆ ಇಪ್ಪತ್ತನಾಲ್ಕು ತಾಸು ದುಡಿಯುವ ನೌಕರರಿಗೆ ಭಾನುವಾರದ ರಜೆಯೂ ಇಲ್ಲ.

ಅರಣ್ಯ ಪಾಲಕರು, ರಕ್ಷಕರು ಮತ್ತು ವೀಕ್ಷಕರು ಕರ್ನಾಟಕದಾದ್ಯಂತ ಸುಮಾರು ಐದು ಸಾವಿರ ಜನರಿದ್ದಾರೆ. ದಾಂಡೇಲಿ ನಗರವೊಂದರಲ್ಲಿಯೇ ಸುಮಾರು ಮುನ್ನೂರು ಜನರಿದ್ದಾರೆ. ಮುವತ್ತು ವರ್ಷಗಳ ನಂತರ ಪ್ರಥಮ ಬಾರಿಗೆ ಸಂಘಟಿತರಾಗಿರುವ ಕಾರ್ಮಿಕರು, ಸಂಘ ಕಟ್ಟಿಕೊಂಡು, ಕೆಲವು ಬೇಡಿಕೆಗಳನ್ನು ಮುಂದಿಟ್ಟು ಕರ್ನಾಟಕದಾದ್ಯಂತ ತಾ. 15-12-79ರಂದು ಒಂದು ದಿನದ ಸಾಂಕೇತಿಕ ಮುಷ್ಕರ ಆಚರಿಸಿದರು.

ಅರಣ್ಯ ನೌಕರರ ಸಂಘವು ಸರ್ಕಾರಕ್ಕೆ ಅನೇಕ ಮನವಿ ಮಾಡಿಕೊಂಡಿದ್ದರೂ ಕೇವಲ ಸಹಾನುಭೂತಿ ಮಾತ್ರ ಸಿಗುತ್ತಿದೆ. ಸರ್ಕಾರ ನೇಮಿಸಿದ ಅನೇಕ ವೇತನ ಆಯೋಗಗಳು ಸಹಾ ಈ ಇಲಾಖೆಯ ಕೆಳದರ್ಜೆ ನೌಕರರಿಗೆ ನ್ಯಾಯವನ್ನು ದೊರಕಿಸಿಲ್ಲ.

ಸಂಸಾರ ಸಮೇತ ಅರಣ್ಯದಲ್ಲಿ ವಾಸಿಸುತ್ತಿರುವ ಈ ನೌಕರರ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಪಟ್ಟಣಗಳಿಗೆ ಹೋಗಬೇಕು. ಆದರೆ ಬರುವ ಕಡಿಮೆ ವೇತನದಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಉಚಿತ ಶಿಕ್ಷಣ ಸೌಲಭ್ಯ ದೊರೆಯಬೇಕು ಎನ್ನುವುದು ನೌಕರರ ಅಭಿಪ್ರಾಯ. ಅರಣ್ಯವಾಸಿಗಳಾದ ಈ ನೌಕರರ ಆತ್ಮರಕ್ಷಣೆಗೆ ಬಂದೂಕು, ನೌಕರರು ಆಕಸ್ಮಿಕವಾಗಿ ಸತ್ತಾಗ ಅವರ ಮಕ್ಕಳಿಗೆ ಉದ್ಯೋಗ, ಆರೋಗ್ಯ ರಕ್ಷಣೆಗೆ ವೈದ್ಯಕೀಯ ಸೌಲಭ್ಯ ಸಿಗಬೇಕೆಂಬುದು ಸಂಘದ ಒತ್ತಾಯ.

ತಾ. 15-12-7 ರಂದು ನಡೆದ ಮುಷ್ಕರಕ್ಕೆ ದಾಂಡೇಲಿ ಘಟಕದ ಸಿ.ಐ.ಟಿ.ಯು. ಮುಖಂಡ ಹಾಗೂ ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಎಂಪ್ಲಾಯೀಸ್ ಯೂನಿಯನ್ನಿನ ಅಧ್ಯಕ್ಷ ಕಾಂ. ಜಿ ವಿ ಪವಾರ್ ಮತ್ತು ಕೋಶಾಧ್ಯಕ್ಷ ಕಾಂ. ಎಂ ಜೆ. ಜನ್ನು ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಅರಣ್ಯ ನೌಕರರ ಮೆರವಣಿಗೆ ತೆಗೆಯಲಾಯಿತು.

ವೇತನ ಏರಿಕೆ, ವಸತಿ ಸೌಲಭ್ಯ, ಸಮವಸ್ತ್ರ, ಪ್ರಾವಿಡೆಂಟ್ ಫಂಡ್(ಭವಿಷ್ಯ ನಿಧಿ), ಗಾಯಗೊಂಡವರಿಗೆ ಪರಿಹಾರಧನ, ಹದಿನೈದು ದಿನಗಳ ವಿಶೇಷ ರಜಾಸೌಲಭ್ಯ ಮುಂತಾದ ಬೇಡಿಕೆಗಳನ್ನಿಟ್ಟು ಮುಷ್ಕರ ನಡೆಸಲಾಗಿತ್ತು. ●

# ತುರ್ತು ಬೇಡಿಕೆಗಳ ಮಂಡನೆ

ತಾ. 10.12.79 ನೇ ಸೋಮವಾರ ಸಂಜೆ 7 ಗಂಟೆಗೆ ಮಂಡಿ ಕೆಲಸಗಾರರ ಸಂಘದ ಸಭೆಯು ಶ್ರೀ ಬಿ.ಕೆ. ಬಸವರಾಜ್‌ರವರ ಅಧ್ಯಕ್ಷತೆಯಲ್ಲಿ ಸೇರಿದರು. ಕಾರ್ಯದರ್ಶಿ ಶ್ರೀ ಕೆ.ಚಂದುಕುಟ್ಟಿಯವರು ಸಂಘದ ಚಟುವಟಿಕೆಗಳ ಬಗ್ಗೆ ವರದಿ ಮಾಡಿದರು. ನಂತರ ಕೆಳಗೆ ಕಂಡವರನ್ನೊಳಗೊಂಡ ಹೊಸ ಪದಾಧಿಕಾರಿಗಳನ್ನು ಚುನಾಯಿಸಿದರು. ಅಧ್ಯಕ್ಷರಾಗಿ ಶ್ರೀ ಬಿ. ಕೆ. ಬಸವರಾಜ್ ಉಪಾಧ್ಯಕ್ಷರುಗಳಾಗಿ ಶ್ರೀಗಳಾದ ವಿ. ಬಸವರಾಜ್, ಹೆಚ್. ಎಂ. ಸಿದ್ದಯ್ಯ ಮತ್ತು ಬಿ. ಎನ್. ಸಿದ್ದಪ್ಪ, ಕಾರ್ಯದರ್ಶಿಗಳಾಗಿ ಶ್ರೀ ಕೆ. ಚಂದುಕುಟ್ಟಿ (ಹಿಂದಿನ ಕಾರ್ಯದರ್ಶಿ), ಉಪಕಾರ್ಯದರ್ಶಿಗಳಾಗಿ ಶ್ರೀಗಳಾದ ಬಿ. ಚೂಡಪ್ಪ, ಎ. ದೊರೈ, ಸಿ. ರಾಮಕೃಷ್ಣ ಮತ್ತು ಮೂಡ್ಲಪ್ಪ, ಖಜಾಂಚಿಯಾಗಿ ಶ್ರೀ ನರಸಿಂಹರಾವ್ ಮತ್ತು 17 ಜನ ಸಮಿತಿ ಸದಸ್ಯರುಗಳು.

**ತುರ್ತು ಬೇಡಿಕೆಗಳ ಮಂಡನೆ:**

ಕನಿಷ್ಟ ವೇತನದ ಕೆಲಸದ ಭದ್ರತೆ, ತುಟ್ಟಿಭತ್ಯೆ ಮುಂತಾದ ಕೆಲವು ಬೇಡಿಕೆಗಳನ್ನು ಮಂಡಿಸಲು ತೀರ್ಮಾನವಾಯ್ತು.

ಮಾಲೀಕರುಗಳ ಗಮನ ಸೆಳೆಯಲು ತಾ. 20-12-79 ರಂದು ಅರ್ಧ ದಿವಸ ಕೆಲಸ ನಿಲ್ಲಿಸಿ ಬೇಡಿಕೆ ದಿನಾಚರಣೆ ಆಚರಿಸಬೇಕೆಂದು ನಿರ್ಧರಿಸಲಾಯಿತು.

ಶ್ರೀ ರಾಮಕೃಷ್ಣರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

○

# ಸತ್ಯಾಗ್ರಹ ಯಶಸ್ವಿಯಾಗಿ ಮುಕ್ತಾಯ

ಉ. ಕ. ಜಿಲ್ಲೆ, ದಾಂಡೇಲಿಯಲ್ಲಿ ತಾ. 13-12-79ರಿಂದ ಸಕ್ಕರೆ, ಸೀಮೆಎಣ್ಣೆಯ ಬೆಲೆಏರಿಕೆ ಮತ್ತು ರೈತರ ಅಭಾವವನ್ನು ವಿರೋಧಿಸಿ ಸಿ ಪಿ. ಎಂ. ಮತ್ತು ಸಿ ಐ ಟಿ. ಯು. ವತಿಯಿಂದ ನಡೆದ ಸರದಿ ಅನ್ನಸತ್ಯಾಗ್ರಹವು ಕೊನೆಗೊಂಡಿತು.

ಈಗಾಗಲೇ ಸಕ್ಕರೆ ಮತ್ತು ಸೀಮೆಎಣ್ಣೆ ಪಡಿತರ ಪದ್ಧತಿಯಲ್ಲಿ ಕೊಡಲಾರಂಭಿಸಿದ್ದಾರೆ. ಅಲ್ಲದೇ ಮಾರ್ಕೆಟ್ಟಿನಲ್ಲಿ ಸರ್ಕಾರಿ ಬೆಲೆಗಿಂತ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡುವವರನ್ನು ದಸ್ತಗಿರಿ ಮಾಡುವದಾಗಿಯೂ, ದಾಂಡೇಲಿಯಲ್ಲಿ ಎಂದಿಗೂ ತಾವು ಸಕ್ಕರೆಯ, ಸೀಮೆಎಣ್ಣೆಯ ಅಭಾವ ಮಾಡುವದಿಲ್ಲವೆಂದು ಹಳಿಯಾಳದ ತಹಸೀಲ್ದಾರರು ಆಶ್ವಾಸನೆ ನೀಡಿದ್ದಾರೆ. ಕಟ್ಟಿಗೆಯ ಬೆಲೆಯನ್ನು ಪರಿಶೀಲಿಸುವದಾಗಿ ತಿಳಿಸಿದ್ದಾರೆ. ಸತ್ಯಾಗ್ರಹಿಗಳಿಗೆ ತಹಸೀಲ್ದಾರರು ಹಣ್ಣಿನ ರಸನೀಡಿ ಹೊರಗೆ ಕರೆತಂದರು.

○

# ಹೋಟೆಲು ಮಜೂರರ ಯಶಸ್ವಿ ಹೋರಾಟ

ದ. ಕ. ಜಿಲ್ಲೆ, ಬಂಟ್ವಾಳ ತಾಲ್ಲೂಕಿನ ಬಿ. ಸಿ. ರೋಡಿನಲ್ಲಿರುವ ಸತ್ಕಾರ ಹೋಟೆಲಿನ ಮಾಲೀಕರು ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆ ಕಾರಣವೆಂದು ನೆಪವೊಡ್ಡಿ ಹಠಮಾರಿತನದಿಂದ ತಾ. 14-12-79 ರಂದು ಹೋಟೆಲನ್ನು ಮುಚ್ಚಿದರು.

ಸದ್ರಿ ಹೋಟೆಲು ಮಜೂರರು ಬಂಟ್ವಾಳ ತಾಲ್ಲೂಕು ಜನರಲ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.)ನ ಸಹಾಯದಿಂದ ಕೆಲವೊಂದು ಕಾನೂನಿನ ಸವಲತ್ತುಗಳನ್ನು ಪಡೆಯುವುದರಲ್ಲಿ ಯಶಸ್ವಿಯಾದರು.

ಕಾರ್ಮಿಕ ಮುಖಂಡರ ಮತ್ತು ಮಾಲೀಕರ ನಡುವೆ ಆದ ಮುಕ್ತ ಮಾತುಕತೆಯಲ್ಲಿ ಬಂಟ್ವಾಳ ತಾಲ್ಲೂಕು ಜನರಲ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಬಿ. ಗೋಪಾಲಗೌಡ, ಅಧ್ಯಕ್ಷ ಬಿ. ಬಾಬುಸುವರ್ಣ ಖಜಾಂಚಿ ಬಿ. ಮಂಜುನಾಥ ಸಪಲ್ಯ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ಹೆಚ್. ಬಂಗೇರ ಮತ್ತು ಹೋಟೆಲು ಮಾಲೀಕರು ಪಾಲ್ಗೊಂಡಿದ್ದರು.

ತೀರ್ಮಾನಗಳು :-

1. ಒಂದು ವರ್ಷದಲ್ಲಿ 1 ತಿಂಗಳಿನಂತೆ ಪ್ರತಿವರ್ಷ ತಿಂಗಳ ವೇತನ

2. ಒಂದುವಾರ ಬಂದಾದ ರಜಾ ಸಂಬಳ.

3. ಗ್ರಾಚ್ಯುಟಿ.

○

# ಮಣಿಪಾಲ್‌ನಲ್ಲಿ ಗೋಲಿಬಾರು

## ಸಿ.ಪಿ.ಐ. (ಎಂ) ಖಂಡನೆ

ತಾರೀಖು 20-12-79 ರಂದು ಮಂಗಳೂರಿನಲ್ಲಿ ಸಭೆ ಸೇರಿದ್ದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಕರ್ನಾಟಕ ರಾಜ್ಯಸಮಿತಿಯು ಅಂಗೀಕರಿಸಿರುವ ನಿರ್ಣಯವೊಂದರಲ್ಲಿ ತಾರೀಖು 19-12-79 ರಂದು ದ. ಕ. ಜಿಲ್ಲೆಯ ಮಣಿಪಾಲ್‌ನಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರು ಗೋಲಿಬಾರು ಮಾಡಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮೂರನೇ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿ ಅಮರನಾಥಶೆಟ್ಟಿ ಮೃತಪಟ್ಟು ಹಲವರಿಗೆ ಗಾಯಗಳಾಗಿರುವುದನ್ನು ಪ್ರಸ್ತಾಪಿಸಿ ಗೋಲಿಬಾರನ್ನು ಉಗ್ರವಾಗಿ ಖಂಡಿಸಿದೆ.

ಗೋಲಿಬಾರನ್ನು ಅಸಮರ್ಥನೀಯವೆಂದು ಟೀಕಿಸಿರುವ ನಿರ್ಣಯವು ಸರ್ಕಾರವು ಈ ಪ್ರಕರಣದ ಬಗ್ಗೆ ನ್ಯಾಯಾಂಗ ವಿಚಾರಣೆಯನ್ನು ನಡೆಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಿದೆ.

●



ತಾ. 3.12.79 ರಂದು ಕುಣಿಗಲ್‌ನಿಂದ ತುಮಕೂರಿಗೆ ಕಾಲ್ನಡಿಗೆಯಲ್ಲಿ ಬಂದ ಮನೆಯಿಲ್ಲದವರು, ಭೂ ರಹಿತ ದಲಿತರು ತುಮಕೂರು ಕಾರ್ಮಿಕರ ಜೊತೆ ಸೇರಿ ತಮ್ಮ ಬೇಡಿಕೆಗಳಿಗಾಗಿ ಹಾಗೂ ವೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸತ್ಯಾಗ್ರಹ ನಡೆಸಿದ ದೃಶ್ಯ.

## ಚುನಾವಣಾ ಪ್ರಚಾರ ಪ್ರಾರಂಭ

[ಒಂದನೇ ಪುಟದಿಂದ]

ಜನತಾಪಕ್ಷ ಹಾಗೂ ಲೋಕದಳದ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ರಾಜ್ಯದಲ್ಲಿ ಲೋಕದಳ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಧ್ಯೆ ಹೊಂದಾಣಿಕೆಯಾಗುವ ಸಂಭವವಿದೆ. ಕಳೆದ ಮುವತ್ತೆರಡು ವರ್ಷಗಳಿಂದ ರೈತರು, ಕಾರ್ಮಿಕರು ಅದರಲ್ಲೂ ಹೆಂಚಿನ ಕಾರ್ಮಿಕರು, ಬೀಡಿ, ಗೇರು ಕೈಗಾರಿಕೆಗಳಲ್ಲಿ ದುಡಿಯುವವರು, ಕೊಡಗಿನ ತೋಟಗಳಲ್ಲಿ ದುಡಿಯುವ ಕಾರ್ಮಿಕರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ. ಕಳೆದೆರಡು ವರ್ಷಗಳಲ್ಲಿ ದ.ಕ. ಜಿಲ್ಲಾ ರೈತ ಸಂಘದ ಪ್ರಭಾವ ಹಳ್ಳಿ, ಹಳ್ಳಿಗಳಿಗೆ ವ್ಯಾಪಿಸಿದೆ. ವಿದ್ಯಾರ್ಥಿಗಳು, ಬುದ್ಧಿಜೀವಿಗಳು ಹಾಗೂ ಜನಸಾಮಾನ್ಯರು ದೇಶದ ರಾಜಕೀಯ ಹಿನ್ನೆಲೆಯಲ್ಲಿ ಹೆಚ್ಚು ಹೆಚ್ಚಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದತ್ತ ನೋಡುತ್ತಿದ್ದಾರೆ. ಪ.ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಸಾಧನೆ, ರೈತ ಕಾರ್ಮಿಕರ ಹೋರಾಟಗಳಲ್ಲಿ ಅದರ ನೇತೃತ್ವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಧೀರ ಹೋರಾಟಗಾರರ ಪಕ್ಷವೆಂಬುದನ್ನು ತೋರಿಸಿದೆ.

ಈ ಹಿನ್ನೆಲೆಯಲ್ಲಿ ತಾ. 13-12-79 ರಂದು ಮಂಗಳೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದ ಎಂಟು ಸ್ಥಳಗಳಲ್ಲಿ, ಹಿಂದೆಂದೂ ಕಾಣದ ಉತ್ಸಾಹ, ಸಂಭ್ರಮ, ಮೆರವಣಿಗೆಗಳೊಂದಿಗೆ ಚುನಾವಣಾ ಪ್ರಚಾರವನ್ನು ಉದ್ಘಾಟಿಸಲಾಯಿತು. ಪಕ್ಷದ ಕಾರ್ಯಕರ್ತರು ಅಭಿಮಾನಿಗಳು ಅಪಾರವಾದ ನಂಬಿಕೆ ವಿಶ್ವಾಸ, ಉತ್ಸಾಹಗಳೊಂದಿಗೆ ಚುನಾವಣಾ ಕಣದಲ್ಲಿ ಓಟಿನ ಸಮರಕ್ಕೆ ಇಳಿದದ್ದನ್ನು ಸ್ಪಷ್ಟವಾಗಿ ಕಾಣಬಹುದಾಗಿತ್ತು.

ಸುಳ್ಯದಲ್ಲಿ ನಡೆದ ಪ್ರಚಾರ ಸಭೆಯನ್ನು ಸ್ಥಳೀಯ ಮುಖಂಡರಾದ ಕಾಂ. ಸೂರ್ಯನಾರಾಯಣಭಟ್ ಉದ್ಘಾಟಿಸಿದರು. ಸುಳ್ಯದ ಬಸ್ ನಿಲ್ದಾಣದಲ್ಲಿ ಸೇರಿದ್ದ ಅಸಂಖ್ಯಾತ ರೈತ, ಕಾರ್ಮಿಕರನ್ನು ಉದ್ದೇಶಿಸಿ ಕಾಂ. ಎನ್. ನಾರಾಯಣ ಭಟ್ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಪಿ. ಕೆ. ಮೂಸಾ ವಹಿಸಿದ್ದರು.

ಪುತ್ತೂರು ಬಸ್ ನಿಲ್ದಾಣದಲ್ಲಿ ಸಂಜೆ 5 ಗಂಟೆಗೆ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ರಾಜ್ಯ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್, ಸ್ಥಳೀಯ ಕಾರ್ಮಿಕ ಮುಖಂಡ ಕಾಂ. ವಿಷ್ಣು ಮೂರ್ತಿ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಯುವ ಮುಂದಾಳು ಮತ್ತು ದಲಿತ ಸಂಘರ್ಷ ಸಮಿತಿಯ ಕಾರ್ಯದರ್ಶಿ ಆಗಿರುವ ಕಾಂ. ಬಿ. ರಾಮಕೃಷ್ಣ ಇವರುಗಳು ಮಾತನಾಡಿದರು. ಸರ್ವಾಧಿಕಾರಿ ಹಾಗೂ ಜಾತೀಯವಾದಿ ಶಕ್ತಿಗಳನ್ನು ತಿರಸ್ಕರಿಸಿ, ದೇಶದ ಅತಿ ದೊಡ್ಡ ಎಡಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಮತ ನೀಡಬೇಕೆಂದರು.

ಮಂಗಳೂರಿನ ಮೈದಾನದಲ್ಲಿ ಚುನಾವಣಾ ಪ್ರಚಾರವನ್ನು ಕಾಂ. ಕಮಲಾಕ್ಷ ಬಂಗೇರ ಉದ್ಘಾಟಿಸಿದರು. ಬಹಿರಂಗ ಸಭೆಯನ್ನು ಉದ್ದೇಶಿಸಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ. ಅಬ್ರಹಾಂ ಕರ್ಕಡ ಮಾತನಾಡಿದರು.

ಉಳ್ಳಾಲ ಕ್ಷೇತ್ರದ ಜಪ್ಪಿನಮೊಗರು ಪ್ರದೇಶದಲ್ಲಿ ನಡೆದ ಸಭೆಯಲ್ಲಿ ಅಭ್ಯರ್ಥಿ ಕಾಂ. ಮಹಾಬಲೇಶ್ವರ ಭಟ್ ಹಾಜರಿದ್ದು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಜಯ, ರೈತ-ಕಾರ್ಮಿಕರ ವಿಜಯವಾದ್ದರಿಂದ ದುಡಿಯುವ ವರ್ಗ ತಮಗೆ ಸಂಪೂರ್ಣ ಬೆಂಬಲ ಕೊಡಬೇಂಕೆದರು.

ವಿಟ್ಲ ಕ್ಷೇತ್ರದ ಪಾಣೆಮಂಗಳೂರಿನಲ್ಲಿ ಚುನಾವಣಾ ಪ್ರಚಾರವನ್ನು ಬಹಿರಂಗ ಸಭೆಯ ಮೂಲಕ ಪ್ರಾರಂಭಿಸಲಾಯಿತು. ಕಾಂ. ಪಿ. ರಾಮಚಂದ್ರ ರಾಯರು ದೇಶದಲ್ಲಿನ ರಾಜಕೀಯ ಪರಿಸ್ಥಿತಿ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಮತನೀಡಬೇಕಾದ ಅವಶ್ಯಕತೆಯನ್ನು ತಿಳಿಸಿದರು.

ಮಡಿಕೇರಿಯಲ್ಲಿ ಡಾ. ಅಪ್ಪಣ್ಣ ಮತ್ತಿತರ ಸ್ಥಳೀಯ ಮುಖಂಡರು ಭಾಗವಹಿಸಿದ್ದ ಸಭೆ ನಗರದ ಜನತೆಯ ಗಮನ ಸೆಳೆದವು. ವಿರಾಜಪೇಟೆಯಲ್ಲಿ, ಕಾಂ.ಮುತ್ತಪ್ಪ(ನಿವೃತ್ತ ಡಿ.ಡಿ.ಪಿ.ಐ.) ಮತ್ತಿತರ ನಾಯಕರ ನೇತೃತ್ವದಲ್ಲಿ ಮೆರವಣಿಗೆ,ಬಹಿರಂಗ ಸಭೆ ನಡೆಯಿತು. ಸೋಮವಾರಪೇಟೆಗೆ ಸೇರಿದ ಕುಶಾಲ ನಗರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಾಂ. ಲತೀಫ್, ಕಾಂ. ಉದಯ ಕುಮಾರ್ ಮಾತನಾಡಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಮತ ಕೋರಿದರು.

**ವಿನಂತಿ :**

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಲ್ಲಾ ಶಾಖೆಗಳು, ಸದಸ್ಯರು ಹಿತೈಷಿಗಳು ಹಾಗೂ ಜನಸಾಮಾನ್ಯರು ಪಕ್ಷದ ಚುನಾವಣಾ ನಿಧಿಗೆ ಉದಾರ ಧನ ಸಹಾಯ ಮಾಡುವುದರ ಮೂಲಕ ಪಕ್ಷದ ಅಭ್ಯರ್ಥಿಯ ವಿಜಯಕ್ಕಾಗಿ ಶ್ರಮಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ರಾಜ್ಯಸಮಿತಿ ವಿನಂತಿಸುತ್ತದೆ.

ಹಣವನ್ನು ಕೆಳಕಂಡವಿಳಾಸಕ್ಕೆ ಕಳುಹಿಸಬೇಕಾಗಿ ಅರಿಕೆ.

ಕಾಂ. ಎನ್. ಎಲ್. ಉಪಾಧ್ಯಾಯ
ಸಿ.ಪಿ.ಐ. (ಎಂ) ಕಛೇರಿ, ಎಲ್-೫೬
ಕೆ.ವಿ. ಟೆಂಪಲ್ ರಸ್ತೆ, ಸುಲ್ತಾನ್‌ಪೇಟೆ
ಬೆಂಗಳೂರು-೫೬೦ ೦೫೩

○

## ....ಎಡರಂಗ ಮುಂದು

[1ನೇ ಪುಟದಿಂದ]

ಕ್ಷೇತ್ರವನ್ನು ಬದಲಾಯಿಸಿದ್ದಾರೆ. ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ರಾಮಮೂರ್ತಿಯವರು ಮೂರು ಕ್ಷೇತ್ರಗಳಲ್ಲಿಯೂ ತಾ. 18-12-79 ರಂದು ಭಾರಿ ಸಂಖ್ಯೆಯಲ್ಲಿ ಸೇರಿದ್ದ ಬಹಿರಂಗ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಜಾತೀಯವಾದಿ ಹಾಗೂ ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸುವ ಅಗತ್ಯ ತಿಳಿಸಿದರು. ಮಧುರೈನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಭಾಗವಹಿಸಿದ್ದ ಮಧುರೈ ಮೇಯರ್ ಶ್ರೀ ಮಧುರೈ ಮುತ್ತು ಹಾಗೂ ಪೌರಾಡಳಿತ ಮಂತ್ರಿ ಶ್ರೀ ಕಾಳಿಮುತ್ತು, ಅಭ್ಯರ್ಥಿ ಕಾಂ. ಬಾಲಸುಬ್ರಮಣ್ಯಂರವರು ಮಾತನಾಡಿದರು. ಶ್ರೀ ಮಧುರೈ ಮುತ್ತುರವರು ಮಾತನಾಡುತ್ತಾ ಕಾಂ. ಬಾಲಸುಬ್ರಮಣ್ಯಂರವರು ಕನಿಷ್ಟ ಒಂದು ಲಕ್ಷ ಮತದಿಂದ ಜಯಗಳಿಸುವರೆಂದು ನುಡಿದರು.

ಕಳೆದ ಬಾರಿ ಸಿ. ಪಿ. ಐ. ನ ರಾಜ್ಯ ಶಾಖೆ ಕಾರ್ಯದರ್ಶಿ ಕಾಂ. ಕಲ್ಯಾಣ ಸುಂದರಂ ಸ್ಪರ್ಧಿಸಿದ್ದ ತಿರುಚಿನಾಪಳ್ಳಿ ಕ್ಷೇತ್ರದಿಂದ ಈ ಬಾರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಯುವ ನಾಯಕ ಕಾಂ. ರಂಗರಾಜನ್ ಸ್ಪರ್ಧಿಸಿದ್ದಾರೆ. ಈ ಕ್ಷೇತ್ರದಲ್ಲೂ ಪಕ್ಷಕ್ಕೆ ಪ್ರಚಂಡ ಜಯಸಿಗುವುದರಲ್ಲಿ ಸಂದೇಹವಿಲ್ಲ. ಕಾರ್ಮಿಕ ನಗರವಾಗಿ ಬದಲಾಗಿರುವ ತಿರುಚಿನಾಪಳ್ಳಿಯಲ್ಲಿ ರೈಲ್ವೆ ಕಾರ್ಮಿಕರು, ಸಿಮ್ಕೋ, ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ನೌಕರರು, ಬೀಡಿ ಹಾಗೂ ಮತ್ತಿತರ ಕಾರ್ಮಿಕರ ಸಂಪೂರ್ಣ ಬೆಂಬಲ ಸಿ. ಪಿ. ಐ. (ಎಂ)ಗೆ ಇದೆ.

ಚಿದಂಬರಂನಿಂದ ಸ್ಪರ್ಧಿಸಿರುವ ಕಾಂ. ರಾಮಲಿಂಗಂರವರಿಗೆ ಈ ಕ್ಷೇತ್ರದಲ್ಲಿ ಪ್ರಬಲವಾಗಿರುವ ಪಕ್ಷದ ರೈತ ಸಂಘದ ಪ್ರಭಾವ ವಿಜಯಗಳಿಸಲು ಸಹಾಯಕವಾಗಿದೆ. ಕಾಂ. ರಾಮಲಿಂಗಂಗೆ ವಿರುದ್ಧವಾಗಿ ನಿಂತಿರುವ ಅಭ್ಯರ್ಥಿಯು ತುರ್ತುಪರಿಸ್ಥಿತಿ ಸಮಯದಲ್ಲಿಡಿ.ಎಂ.ಕೆ.ಯ ನೂರಾರು ಕಾರ್ಯಕರ್ತರೊಂದಿಗೆ ಜೈಲಿಗೆ ಹೋಗಿದ್ದರು. ಈಗ ಇವರೇ ಇಂದಿರಾಗಾಂಧಿಯವರ ಸರ್ವಾಧಿಕಾರಿ ಬಾವುಟವನ್ನು ಎತ್ತಿ ಹಿಡಿದಿರುವುದನ್ನು ಇಲ್ಲಿಯ ಜನ ಡಿ.ಎಂ.ಕೆ. ಯ ಬಗ್ಗೆ ಅಪಹಾಸ್ಯ ಮಾಡುವಂತಾಗಿದೆ.

○

## ಸಂಪಾದಕೀಯ

[ಒಂದನೇ ಪುಟದಿಂದ]

ಬಿಹಾರ, ಹರಿಯಾನ, ಕೇರಳಗಳಲ್ಲಿ ಒಂದಾಗಿ ಕೆಲಸ ಮಾಡುತ್ತಿರುವ ಜಾತೀಯವಾದಿ ಜನತಾ ಹಾಗೂ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಬಗ್ಗೆ ಜನತೆ ಎಚ್ಚರದಿಂದ ಇರಬೇಕು.

ದುಡಿಯುವ ವರ್ಗದ ಹಿತರಕ್ಷಣೆಗಾಗಿ ಧೀಮಂತ ಹೋರಾಟಗಳನ್ನು ನಡೆಸಿರುವ ಎಡ ಪಕ್ಷಗಳು ಮಾತ್ರ ದೇಶದಲ್ಲಿ ಪ್ರಜಾಪ್ರಭುತ್ವ ಜಾತ್ಯಾತೀತತೆಯನ್ನು ಉಳಿಸಬಲ್ಲರು. ಆದ್ದರಿಂದ ಜನತೆ ಎಡಪಕ್ಷಗಳಾದ ಸಿ. ಪಿ. ಐ. (ಎಂ), ಸಿ. ಪಿ. ಐ , ಆರ್. ಎಸ್. ಪಿ., ಫಾರ್ವರ್ಡ್‌ಬ್ಲಾಕ್, ರೈತ, ಕಾರ್ಮಿಕರ ಪಕ್ಷ ಹಾಗೂ ಪ್ರಜಾಸತ್ತಾತ್ಮಕ ಪಕ್ಷಗಳಾದ ಅರಸು ಕಾಂಗ್ರೆಸ್, ಲೋಕದಳ, ಅಣ್ಣಾ ಡಿ. ಎಂ. ಕೆ. ಮತ್ತು ಅಕಾಲಿದಳಗಳಿಗೆ ಮತ ನೀಡಬೇಕಾಗಿದೆ.

○



## ಮಂಗಳೂರು ಲೋಕಸಭಾ ಕ್ಷೇತ್ರದ ಮತದಾರರಲ್ಲಿ ವಿನಂತಿ

**ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**
**ಅಭ್ಯರ್ಥಿ**

## ಕಾಂ. ಮಹಾಬಲೇಶ್ವರ ಭಟ್

**ಇವರಿಗೆ ತಮ್ಮ ಅಮೂಲ್ಯ ಮತನೀಡಿ**

**ಚುನಾವಣಾ ಗುರುತು**



**ಕತ್ತಿ, ಸುತ್ತಿ, ನಕ್ಷತ್ರ**

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
*EDITOR* : M. K. BHAT